Reg. No. M. 1550. KODAGU 13—9—1935

IF NOT delivered please return to "KODAGU" OFFICE, MERCARA.

ಕೊಡಗು

ಅಚ್ಚುಮೆಚ್ಚಿನ ಮುದ್ರಣ ಕೆಲಸಕ್ಕೆ "ಕೊಡಗು" ಪ್ರೆಸ್ಸು, ಮಡಿಕೇರಿ.

ಹೆಚ್ಚಿನ ವಿಷಯಕ್ಕೆ ಕೂಡಲೆ ವಿಚಾರಿಸಿರಿ.

ಕಸ್ಮೀನ ಭೂಸದಯುಯಾ ವಿದ್ಯಾ ನೀಚೆ ಪ್ರಯತ್ನಾಃ॥ ಐಕ್ಯಮುಕ್ಕೀನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪು.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ಸಂಪುಟ ೧೫] ಮಡಿಕೇರಿ, ಸನ್ ೧೯೩೫ನೇ ಇಸವಿ ಸಪ್ಟಂಬರ್ ತಾರೀಕು ೧೩ನೇ ಶುಕ್ರವಾರ. [ಸಂಚಿಕೆ ೧೫

By Appointment
To H. E. The Governor of Madras.

CUPS AND MEDALS.



Telephone; 3145

Telegrams: 'PRECIOUS.'

V. SUBRAMANIA IYER.
Jeweller, & Diamond Merchant,
52—43. 2 & 3 Kuppumuthu Street Tiruvateswaranpet. MADRAS. POST BOX 423 TRIPLICANE.
Catalogue & special designs with quotations (free) on enquiry

THE CANARA BANKING CORPORATION UDIPI, LTD.,

Established 1906.] [Incorporated in British India.

Head office;—UDIPI (S. Kanara.)

It will pay you if you call at our offices at MERCARA or VIRARAJENDRAPET.

(1) Fixed Deposits are now accepted up to 5%.
(2) Current accounts opened free of any charge and interest allowed up to 2%.
(3) Savings Bank accounts—Interest allowed at

3½%

Special facilities offered—(1) Withdrawals allowed by cheques.
(2) production of pass books unnecessary at each withdrawal
(3) accounts transfered from one office to another free of any charges
(4) Cumulative Deposits—a speciality.

Advances granted on approved securities on easy terms.

All kinds of banking business transacted For further particulars please apply to any of our offices.

Udipi
29—7—1935 52—44 M. Srinivasa Prabhu, Manager.

ಶಬ್ದಗಳಲ್ಲಿ ನಿಷ್ಪಕ್ಷಪಾತವಾಗುವವೋ ಆಲ್ಲಿ ಕಾರ್ಯಸ್ಥಿತಿ ಮತ್ತು ಸಂಖ್ಯೆಗಳು ನಿಜಾಂಶವನ್ನು ವ್ಯಕ್ತಗೊಳಿಸುವವು.

"ಜನರಲ್ ಅಷ್ಯೂರೆನ್ಸ್" ಅಜ್ಮೀರ್.

ಈ ವಿಮಾ ಸಂಸ್ಥೆಯು ಕಠಿಣ ಶೋಧನೆಗಳನ್ನು ಈ ಫಲಿತಾಂಶಗಳಿಂದ ಧಿಕ್ಕರಿಸಿರುವದು.

ಜಾರಿಯಲ್ಲಿರುವ ವಿಮೆಯೊಬಲಗು (ಹೆಚ್ಚು) 265 ಲಕ್ಷ
ಲೇವಾದೇವಿಯಲ್ಲಿರುವಯೊಬಲಗು ಸುಮಾರು 70 ಲಕ್ಷ
ವಾರ್ಷಿಕ ಉತ್ಪತ್ತಿಗಳು (ಹೆಚ್ಚು) ರೂ. 16 ಲಕ್ಷ
ವಿಮಾ ಹೆಕ್ಕುಗಳ ಪಾವತಿ ರೂ. 33 ಲಕ್ಷ

ಬೋನಸ್ಸು ಬೇರೆ ಕಂಪೆನಿಗಳಿಗಿಂತ ಅಧಿಕ

ಜೀವಾವಧಿ ಪಾಲಿಸಿಗಳಿಗೆ ಸಾಲಯೋಗ್ಯರೂ. 25%
ಎಂಡೋಮೆಂಟ್ ಪಾಲಿಸಿಗಳಿಗೆ ಸಾಲಯೋಗ್ಯ ರೂ. 20%

ವಿಶೇಷ್ಟಿಯ ವಿಮೆಯುಗಳು ವಿಶೇಷ ಲಾಭದಾಯಕ.

ಇತರ ವಿವರಗಳಿಗೆ ಕೂಡಲೇ ಈ ಕೆಳಗಿನವರಿಗೆ ಬರೆಯಿರಿ:—

ಪಿ. ಡಿ. ಭಾರ್ಗವ, ಎಫ್. ಎಸ್. ಎಸ್. (ಲಂಡನ್).
ಜನರಲ್ ಮೇನೇಜರ್, ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್. ಅಥವಾ:—

ಎ. ಎಸ್. ಎಸ್ ಅಯ್ಯಂಗಾರ್,
ಸುಪರಿಂಟಿಂಡೆಂಟ್, ಜನರಲ್ ಅಷ್ಯೂರೆನ್ಸ್ ಬಿಲ್ಡಿಂಗ್, ಚೆಕ್ಕಪೇಟೆ, 3ನೇ ಲೇನ್,
52—15 ಬೆಂಗಳೂರು ಸಿಟಿ.

ವಿವಿಧ ವಾರ್ತೆಗಳು.

ಒಂದೇ ದಿನ ಎರಡು ಸೋಲು!
ಪ್ರಜಾಪಕ್ಷದವರಿಗೆ ಪ್ರಚಂಡ ವಿಜಯ.

ಕಳೆದ ತಾ. 4ರಲ್ಲಿ ಕೇಂದ್ರ ನ್ಯಾಯವಿಧಾಯಕ ಸಭೆಯಲ್ಲಿ ಹಿಂದೂಸ್ಥಾನದಲ್ಲಿಯೇ ರೈಲು ಇಂಜನುಗಳನ್ನು ತಯಾರಿಸಬೇಕೆಂದು ಶ್ರೀ ಸಾಮಿ ವೆಂಕಟಾಕಲಂ ಚೆಟ್ಟಿಯಾರರು ತಂದ ತರಾವು ಸರ್ಕಾರದವರ ಪ್ರಚಂಡ ಪ್ರತಿಭಟನೆಯಿದ್ದರೂ ಬಹುಮತದಿಂದ (65 ಪ್ರಜಾ ಪಕ್ಷಕ್ಕೆ, ಸರ್ಕಾರದ ಕಡೆ 45) ಅಂಗೀಕೃತವಾಯಿತು.

ಇದೇ ದಿವಸ ಡಾ. ಖಾನ್‌ಸಾಹೇಬರು ಒಂದು ಅಡ್ಜರ್ನ್‌ಮೆಂಟ್ ತರಾವನ್ನು ತಂದು ಆ ಮೂಲಕ ಸರ್ಕಾರದವರು ಗಡಿನಾಡಿನ ಜನರ ಮೇಲೆ ಬಾಂಬುಗಳನ್ನು ಹಾಕಿದ ವಿಷಯವನ್ನು ಬಲವಾಗಿ ಟೀಕಿಸಿ ಖಂಡಿಸಿದರು. ಈ ಸಂದರ್ಭದಲ್ಲಿ ಶ್ರೀ ಭುಲಭಾಯಿ ದೇಸಾಯಿಯವರ ಭಾಷಣವು ಬಹು ಪ್ರಚಂಡವಾಗಿದ್ದಿತು. ಡಾ. ಖಾನ್ ಸಾಹೇಬರ ತರಾವು ಬಹುಮತದಿಂದ ಮಂಜೂರಾಯಿತು. ತರಾವಿನ ಪರವಾಗಿ 67 ಮತ ವಿರೋಧವಾಗಿ 44 ಮತಗಳೂ ಕೊಡಲ್ಪಟ್ಟವು.

—೦೦೦—

ಮತವಿವಾದ ತೀರಿಲ್ಲ.
ಸತ್ಯಾಗ್ರಹ ಮೂಡುವರಂತೆ!

ಷಾಹಿದ್‌ಗಂಜ್ ಮಸೀದಿಯ ವಿಷಯವಾದ ಜಳವಳವು ಸದ್ಯ ಮುಗಿಯುವಂತೆ ತೋರುವುದಿಲ್ಲ. ಪಂಜಾಬು ಮತ್ತು ವಾಯವ್ಯ ಪ್ರಾಂತ್ಯಗಳ ಮಹಮ್ಮದೀಯರು ಸುಮಾರು 12 ತಾಸುಗಳ ವರೆಗೆ ಚರ್ಚಿಸಿ ಯಾವ ರೀತಿಯಿಂದಲಾದರೂ ಮಸೀದಿಯನ್ನು ತಮ್ಮ ಸ್ವಾಧೀನಪಡಿಸಿಕೊಳ್ಳಬೇಕೆಂದು ನಿರ್ಧಾರ ಮಾಡಿರುವರು. ಸತ್ಯಾಗ್ರಹ ಕೈಕೊಳ್ಳುವ ವಿಷಯವೂ ಸಭೆಯ ಮುಂದೆ ಬಂದಿತ್ತೆಂದೂ, ಈ ವಿಷಯದಲ್ಲಿ ಸರ್ವಾಧಿಕಾರಿಗಳನ್ನೂ, ಕಾರ್ಯಕಾರಿ ಸಮಿತಿಗಳನ್ನೂ ನೇಮಿಸಿರುವರೆಂದೂ ತಿಳಿದು ಬರುತ್ತದೆ.

—೦೦೦—

ಉಗ್ರ ವೃತ.
ಮರಣಾಂತಿಕ ಉಪವಾಸ.

ಪಂ. ರಾಮಚಂದ್ರ ಶರ್ಮರು ಕಲ್ಕತ್ತದ ಕಾಳಿಘಾಟ್ ದೇವಸ್ಥಾನದಲ್ಲಿ ನಡೆಯುವ ಪ್ರಾಣಿಬಲಿ ನಿಲ್ಲುವ ವರೆಗೆ ತಾವು ಮರಣಾಂತಿಕ ಉಪವಾಸ ವ್ರತವನ್ನಾಚರಿಸುವುದಾಗಿ ನಿಶ್ಚಯ ಮಾಡಿ ತಾರೀಖು 5 ರಲ್ಲಿ ವ್ರತವನ್ನು ತೊಡಗಿರುವರು.

—೦೦೦—

ಅಮೇರಿಕಾದಲ್ಲಿ ರಷ್ಯದವರ ತತ್ವ ಪ್ರಚಾರ.

ರಷ್ಯದವರು ಅಮೇರಿಕದಲ್ಲಿ ತಮ್ಮ ತತ್ವಗಳ ಪ್ರಚಾರ ಮಾಡಿ ದೇಶದ ಶಾಂತಿಭಂಗ ಮಾಡುವರೆಂದು ತಿಳಿದು ಅಮೇರಿಕದ ಸರ್ಕಾರದವರು ರಷ್ಯ ಸರಕಾರಕ್ಕೆ ಒಂದು ಮನವಿಯನ್ನು ಮಾಡಿರುವರು. ರಷ್ಯವು ತನ್ನ ಭಾಷೆಗೆ ಸರಿಯಾಗಿ ನಡೆಯುತ್ತಿದ್ದರೆ ಅಮೇರಿಕ - ರಷ್ಯಗಳ ಮಿತ್ರತ್ವಕ್ಕೇನೇ ಭಂಗ ಉಂಟಾಗಬಹುದೆಂದು ಅದರಲ್ಲಿ ಬರೆದಿರುವುದು. ವಿಚಾರಗಳು ಉತ್ತಮವಿದ್ದಲ್ಲಿ ಅದರ ಪ್ರಚಾರಕ್ಕೆ ಪ್ರೋತ್ಸಾಹವಲ್ಲದೆ ಅಡಚಣೆ ಏತಕ್ಕಾಗಿ?

—೦೦೦—

ತಕ್ಕು ಸನ್ಯಾಸಿಗಳನ್ನು ನಂಬಬೇಡಿ.

ಅಲ್ಲಹಾಬಾದಿನಲ್ಲಿ ಹಿಬಾಬಾ ಎಂಬೊಬ್ಬ ಸನ್ಯಾಸಿಯು ಬರ್ದ್ವಾರ್ ರಾಜರ ಕಾಯಿಲೆಯನ್ನು ಗುಣ ಮಾಡಲು ಹೋದನು. ಆತನು ಕಾಯಿಲೆಯನ್ನು ಪರೀಕ್ಷೆಮಾಡಿ, ಒಂದು ಆನೆಯನ್ನು ತೆಗೆದು ಶಾಸ್ತ್ರೋಕ್ತವಾದ ಮಂತ್ರ ಬಲದಿಂದ ಅರಸರ ಕಾಯಿಲೆಯನ್ನು ಆ ಆನೆಗೆ ಹಿಡಿಯುವಂತೆ ಮಾಡಿ ಅರಸರನ್ನು ಗುಣಮುಖನನ್ನಾಗಿ ಮಾಡುವೆನೆಂದು 3000 ರೂ. ಗಳನ್ನು ಜಾರಿಸಿ ವಿಶ್ವಾಸಘಾತಕ ಮಾಡಿದನು. ಅವನನ್ನೀಗ ದಸ್ತಗಿರಿ ಮಾಡಿ 1½ ವರ್ಷ ಕಠಿಣ ಸಜೆಯನ್ನೂ 1000 ರೂ. ಜುಲ್ಮಾನೆಯನ್ನೂ ವಿಧಿಸಿದ್ದಾರೆ. ಹೀಗೆಷ್ಟೋ ಮೋಸಗಳು ಇಂದೂ ನಾಳೆಯೂ ನಡೆಯುತ್ತಲಿದೆ.

—೦೦೦—

ಹಿಂದೂ ದೇಶದಿಂದ ಧಾನ್ಯಗಳ ರಫ್ತು.

ಕಳೆದ ಪಾರ ಬೊಂಬಾಯಿಂದ 10,000 ಗೋಣಿ ಗೋಧಿ ಮತ್ತು 4,000 ಗೋಣಿ ಅಕ್ಕಿ ಆಫ್ರಿಕಾ ದೇಶಕ್ಕೆ ರಫ್ತಾಯಿತು. ಇನ್ನೆಷ್ಟೋ ಸಾವಿರ ಜಂಗಾಳ ಮತ್ತು ಬಂಗೂನ್ ಅಕ್ಕಿ ಗೋಣಿಗಳು ಬಂದು ಬೊಂಬಾಯಿಯಲ್ಲಿ ರಫ್ತಾಗಲು ಸಿದ್ಧವಾಗಿವೆ. ವ್ಯಾಪಾರಿಗಳು ದೊಡ್ಡ ದೊಡ್ಡ ಕಂಟ್ರಾಕ್ಟು ವಹಿಸಿಕೊಂಡಿರುವರಂತೆ. 15 ಲಕ್ಷ ರೂ. ಭಂಡವಾಳವಿರುವ ಒಂದು ಕಂಪೆನಿಯು ಸ್ಥಾಪಿತವಾಗಿ ಆಫ್ರಿಕಾದೊರೆದಿಗೆ ದೊಡ್ಡ ವ್ಯಾಪಾರಗಳನ್ನು ಕೈಕೊಳ್ಳುತ್ತಿದೆ.

—೦೦೦—

ಲಂಡನಿಗೆ ಪ್ರಯಾಣ.
ಹಿಂದೀಯರ ಹಿತಚಿಂತಕರು.



(ದೀನಬಂಧು ಆಂಡ್ರೂಸರವರು.)

ದೀನಬಂಧು ಆಂಡ್ರೂಸರು ತಾ. 31ರಲ್ಲಿ ಈ ದೇಶದಿಂದ ಲಂಡನಿಗೆ ಪ್ರಯಾಣ ಬೆಳೆಸಿದರು. ಲಂಡನಿಗೆ ಹೋದೊಡನೆಯೇ ಝಾನ್ಸಿಬಾರನ ಹಿಂದೀಯರ ಪರವಾಗಿ ಕೆಲಸ ಮಾಡುವುದಾಗಿ ತಿಳಿಸಿದರು.

—೦೦೦—

'ಹಿಂದೂ ಮಿಶನ್' ಪ್ರಚಾರ ಕಾರ್ಯ.
ಮತಪರಿವರ್ತನೆಯ ಪ್ರಗತಿ.

ಡಾಲ್ಟನಗಂಜ ಎಂಬಲ್ಲಿ 'ಶ್ರದ್ಧಾನಂದ ಹಿಂದೂ ಮಿಶನ್' ನವರ ಪ್ರಚಾರ ಕಾರ್ಯದಿಂದ 425 ಮಂದಿ ಕ್ರೈಸ್ತರು ಹಿಂದೂಗಳಾದರು

'ಲೋಹರ್ ದಗಾ' ಎಂಬ ಗ್ರಾಮದಲ್ಲಿ 245 ಮಂದಿ ಮಂದಿ ಕ್ರೈಸ್ತರು ಹಿಂದೂಗಳಾದರು.

'ಚಾಲರಾ' ಗ್ರಾಮದಲ್ಲಿ ಪಾದ್ರಿಗಳು ಅಲ್ಲಿಯ ಬಾದಹಿ ಎಂಬ ಜಾತಿಯವರನ್ನು ಕ್ರೈಸ್ತ ಮತಕ್ಕೆ ಸೇರಿಸಿದ್ದರು. ಅಲ್ಲಿಗೆ ಆರ್ಯ ಸಮಾಜದ ಕಡೆಯಿಂದ ಪಂಡಿತ ಓಂಕಾರದತ್ತರು ಹೋಗಿ ಪಾದ್ರಿಗಳೊಡನೆ ವಾದಕ್ಕೆ ನಿಲ್ಲಲು ಪಾದ್ರಿಗಳು ಬೇರೆ ಬೇರೆ ಕೆಲಸದ ನೆವ ಹೇಳಿ ಜನರ ಮಧ್ಯದಿಂದ ಜಾರಿಕೊಟ್ಟರು. ಅಲ್ಲಿಯೂ ನಾಲ್ಕು ಕುಟುಂಬವೆಂದರೆ 41 ಮಂದಿ ಕ್ರೈಸ್ತರು ಹಿಂದೂಗಳಾದರು.

ಹೌರಾದಲ್ಲಿ ಇಬ್ಬರು ಸ್ತ್ರೀಯರು ಇಬ್ಬರು ಪುರುಷರು ಹೀಗೆ ನಾಲ್ಕು ಮಂದಿ ಮಹಮ್ಮದೀಯರು ಹಿಂದುಗಳಾದರು.

'ಅಮರವತಿಯಲ್ಲಿ' ಒಬ್ಬ ಮಹಮ್ಮದೀಯನನ್ನು ಶುದ್ಧಿಗೊಳಿಸಲಾಯಿತು.

ಈ ಪ್ರಕಾರ 716 ಮಂದಿಯನ್ನು ಶುದ್ಧಿಗೊಳಿಸಲಾಯಿತು. ಎಂದು ಆರ್ಯಮಿತ್ರ'ವೆಂಬ ಹಿಂದೀ ಪತ್ರಿಕೆಯು ತಿಳಿಸುತ್ತದೆ.

—೦೦೦—

ಇಟಲಿ - ಅಬಿಸೀನಿಯಾ
ಅಬಿಸೀನಿಯಾದ ಎಚ್ಚೆ ಖರಾರು.

ಅಬಿಸೀನಿಯಾದ ಅರ್ಧಕ್ಕಿಂತ ಹೆಚ್ಚು ಪ್ರದೇಶಗಳಲ್ಲಿ 75 ವರ್ಷಗಳ ವರೆಗೆ ಭೂನಿಯಿಂದ ಎಂಟೆ ಎತ್ತುವ ಅಧಿಕಾರವನ್ನು ಅಮೇರಿಕಾದ ಒಂದು ದೊಡ್ಡ ಕಂಪೆನಿಗೆ ಕೊಡಲಾಗಿದೆ. ಇದರಿಂದ ಅಬಿಸೀನಿಯಾಕ್ಕೆ ಇಂದಿನ ಗಂಡಾಂತರದ ಸಮಯದಲ್ಲಿ ಹೆಚ್ಚು ಪ್ರಯೋಜನವಾಗಿದೆ. ಇಟಲಿಯ ವ್ಯಾಪಾರಗಳಾದ ಎರಿಟ್ರಿಯಾ ಮತ್ತು ಸೋಮಾಲಿಲೆಂಡಿನ ಎಲ್ಲೆಕಟ್ಟಿನಲ್ಲಿರುವ ಪ್ರದೇಶಗಳನ್ನೇ ಈ ಪ್ರಕಾರ 75 ವರ್ಷಗಳ ಅವಧಿಗೆ ಖರಾರು ಮಾಡಿರುವರು. ಇದರಿಂದ ಅಬಿಸೀನಿಯಾಕ್ಕೆ ಎರಡು ವಿಧದ ಪ್ರಯೋಜನವಾಗಿದೆ. (1) ಇಟಲಿಯವರು ಅಬಿಸೀನಿಯಾವನ್ನು ಧಾಳಿಗೈದಲ್ಲಿ ಮೊದಲು ಅಮೇರಿಕಾ ಕಂಪೆನಿಯವರಿಗೆ ನಷ್ಟಪಡಿಸಬೇಕಾಗುವದು. ಆಗ್ಗೆ ಅಮೇರಿಕನರು ಸುಮ್ಮನಿರುವುದಿಲ್ಲ. (2) ಅಬಿಸೀನಿಯಾಕ್ಕೆ ತನ್ನ ಯುದ್ಧಾರ್ಥವಾಗಿ ಬೇಕಾಗುವ ಯುದ್ಧ ಸಾಮಗ್ರಿಗಳನ್ನು ಕೊಂಡುಕೊಳ್ಳಲು ಸಾಕಷ್ಟು ದ್ರವ್ಯವು ದೊರೆಯಿತು ಅಬಿಸೀನಿಯಾ ಅಂಸರ ರಾಜಕುಶಲತೆಗೆ ಮುಸಲೋನಿಯು ಬೆರಗಾಗಿರುವನು.

ಇದಕ್ಕೆ ಪ್ರತಿಭಟನೆ.

ಈ ಒಪ್ಪಂದಕ್ಕೆ ಯೂರೋಪಿನ ಅನೇಕ ರಾಷ್ಟ್ರಗಳೆಲ್ಲವೂ ಪ್ರತಿಭಟಿಸಿವೆ. ಅಬಿಸೀನಿಯಾದ ನಿಸ್ಸಾಹಯ ಸ್ಥಿತಿಯಿಂದ ಸೂರೆಗೊಳ್ಳಬೇಕೆಂದಿದ್ದ ರಾಷ್ಟ್ರಗಳೆಲ್ಲವೂ ಈಗ ಜಟಪಟಿಸುತ್ತವೆ. ಇಂಗ್ಲೆಂಡು ಮತ್ತು ಫ್ರಾನ್ಸು ಇದರಿಂದ ಹೆಚ್ಚು ಸಂತಯಗ್ರಸ್ಥವಾಗಿರುವವು. ಈ ಪ್ರಕಾರದ ಮಹತ್ವದ ಒಪ್ಪಂದಕ್ಕೆ ಅಬಿಸೀನಿಯಾವು ಈ ರಾಷ್ಟ್ರಗಳ ಅಭಿಪ್ರಾಯವನ್ನು ಕೇಳದಿದ್ದದ್ದು ಮಹಾ ದೋಷವೆಂದು ಅಬಿಸೀನಿಯಾವನ್ನು ಇಂಗ್ಲೆಂಡು ಆರೋಪಿಸುತ್ತಲಿರುವದು. ನಿಸ್ಸಾಹಯಕ ರಾಷ್ಟ್ರವು ಮಾಡಿದೆಲ್ಲ ತಪ್ಪೆ! ತನ್ನ ಬಾಗಿಲನ್ನು ಕೊಳ್ಳೆಗಾರರಿಗೆ ತೆರೆದಿಟ್ಟರೆ ಮೂರ್ಖ ಸರಿ! ಇಲ್ಲದಿದ್ದರೆ ಎಲ್ಲವೂ ದ್ರೋಹವೇ ಎಂಬಂತಾಗಿದೆ.

ರಾಷ್ಟ್ರ ಸಂಘದ ಅಧಿವೇಶನ.

ಈ ತಾ. 4ರಂದ ರಾಷ್ಟ್ರ ಸಂಘದ ಸಭೆಯವರು ಈ ಸಮಸ್ಯೆಯನ್ನು ತೀರ್ಮಾನಿಸಲುಪಕ್ರಮಿಸಿರುವರು. ಇಟಲಿಯ ಸದಸ್ಯರು ಅಬಿಸೀನಿಯಾದ ಸದಸ್ಯರಿಗೆ ಸಭೆಯಲ್ಲಿ ಭಾಗವಹಿಸುವ ಅಧಿಕಾರವನ್ನು ಕೊಡಕೂಡದು, ಅವರು ಕಾಡುಜನರು ಅವರಿಗೆ ಇಟಲಿಯ ಸಮಾನತ್ವದಲ್ಲಿ ರಾಷ್ಟ್ರ ಸಂಘದಲ್ಲಿ ಸ್ಥಳ ಕೊಡಬಾರದೆಂದು ವಾದಿಸಿದರು. ಅಬಿಸೀನೀಯರೊದವರು ಪಾಶ್ಚಾತ್ಯ ದೃಷ್ಟಿಯಿಂದ ಅಸ್ಪೃಶ್ಯರಾಗಿರುವರು. ಆದರೆ ರಾಷ್ಟ್ರ ಸಂಘವು ಅದಕ್ಕೊಪ್ಪದೆ ಅಬಿಸೀನಿಯಾದವರಿಗೆ ಅವರ ಹವಾಲುಗಳನ್ನು ಸಭೆಯ ಮುಂದಿಡಲು ಅಧಿಕಾರವನ್ನು ಕೊಟ್ಟಿದೆ.

5 ಮಂದಿಯ ಮತ್ತೊಂದು ಕಮಿಟಿ

ಈ ವಿಷಯ ಪುನಃ ಪರಾಂಬರಿಸಿ ವರದಿಯನ್ನೊಪ್ಪಿಸಲು 5 ಮಂದಿ ಸದಸ್ಯರಿಂದ ಕೂಡಿದ ಮತ್ತೊಂದು ಕಮಿಟಿಗೆ ಬಿಡಲಾಗಿದೆ. ಆ ಕಮಿಟಿಯಲ್ಲಿ (1) ಸೆನರ್ ಮಡರೈಗ (ಫ್ರೆಂಚ್ ಲೇಂಡಿನ ಪ್ರತಿನಿಧಿ ಮತ್ತು ಅಧ್ಯಕ್ಷ) (2) ಮೆ. ಈಡನ್ (ಇಂಗ್ಲೆಂಡು) (3) ಯಂ. ಲಾವಲ್ (ಫ್ರಾನ್ಸ್) (4) ಕರ್ನಲ್ ಬೆಕ್ (ಸ್ಪೈನ್) (5) ಟೆಫಿಕ್ ಅರಾಸ್ (ಟರ್ಕಿ) ಇವರುಗಳು ನೇಮಿಸಲ್ಪಟ್ಟಿರುವರು. ಕಮಿಟಿಯ ತೀರ್ಮಾನಗಳು ಇನ್ನೂ ಪೂರೈಸಿರುವುದಿಲ್ಲ.

ಸುಯೇಜ್ ಕಾಲುವೆಯನ್ನು ಮುಚ್ಚಲಾಗುವದೇ?

1888 ರಲ್ಲಿ ಕಾನ್ಸ್‌ಟಾಂಟಿನೊಪಲಿನಲ್ಲಿ ಆದ ಒಪ್ಪಂದದ ಪ್ರಕಾರ 'ಸುಯೇಜ್' - ಕಾಲುವೆಯು ಎಲ್ಲ ವೇಳೆಗಳಲ್ಲೂ ಎಲ್ಲ ಹಡಗುಗಳಿಗೂ ತೆರೆದಿಡಲ್ಪಡಬೇಕೆಂದಿದೆ. ಅದೇ ಮೇರೆ 1911 ರಲ್ಲಿ ಇಟಲಿ - ಟರ್ಕಿ ಯುದ್ಧವಾದಾಗ ಇಟಲಿಯ ಯುದ್ಧನಾವೆಗಳು ಸುಯೇಜ್ ಕಾಲುವೆಯಲ್ಲೇ ಹಾದು ಹೋಗುತ್ತಿದ್ದವು. ಆದ್ದರಿಂದ ಈಗಸಹ ಇಟಲಿಯ ಯುದ್ಧನಾವೆಗಳಿಗೆ ಕಾಲುವೆಯನ್ನು ಮುಚ್ಚಲಾಗುವದಿಲ್ಲವೆಂದು ಅನೇಕರ ಅಭಿಮತ.

ಅಬಿಸೀನಿಯಾವನ್ನು ಬ್ರಿಟಿಷ್ ಮೇಲ್ವಿಚಾರಣೆಗೆ ಒಪ್ಪಿಸುವರೇ?

ಅಬಿಸೀನಿಯಾದ ಇಂದಿನ ಸಂದಿಗ್ಧ ಸಮಯದಿಂದ ಪಾರಾಗಲೋಸುಗ ತಮ್ಮ ರಾಜ್ಯಾಳಿತವನ್ನು ಕೆಲವು ವರ್ಷಗಳ ವರೆಗೆ ಬ್ರಿಟಿಷರಿಗೆ ಒಪ್ಪಿಸುವದು ಉಚಿತವೆಂದು ಅನೇಕ ಅಬಿಸೀನಿಯಾ ಮುಖಂಡರು ಅಭಿಪ್ರಾಯ ಪಡುತ್ತಿರುವರಂತೆ. ಆದರೆ ಅಬಿಸೀನಿಯಾ ಚಕ್ರವರ್ತಿಗಳ ಅಭಿಪ್ರಾಯವು ತಿಳಿಯಬಂದಿಲ್ಲ. ಅಬಿಸೀನಿಯಾದವರಿಗೆ ಈ ಹಿತೋಪದೇಶ ಯಾರು ಕೊಟ್ಟಿರಬಹುದು?

ಯುದ್ಧ ಸಿದ್ಧತೆಗಳು.

ಇಟಲಿಯವರು ಒಂದು ಲಕ್ಷಕ್ಕೆ ಮಿಕ್ಕಿದ ಸೈನ್ಯವನ್ನು ಅಬಿಸೀನಿಯಾದ ಎಲ್ಲೆಕಟ್ಟಿನಲ್ಲಿರುವ ತನ್ನ ವ್ಯಾಪಾರದಲ್ಲಿ ಸಿದ್ಧಪಡಿಸಿದೆ. ಇವರನ್ನೆದುರಿಸಲು ಒಂದು ಪಾರ್ಶ್ವದಲ್ಲಿ 50 ಸಾವಿರ ಸುಸಜ್ಜಿತ ಯೋಧರೂ ಮತ್ತೊಂದು ಪಾರ್ಶ್ವದಲ್ಲಿ 35 ಸಾವಿರ ಸೈನಿಕರೂ ಅಬಿಸೀನಿಯಾದಲ್ಲಿ ಇಟಲಿಯವರ ಧಾಳಿಯನ್ನು ನಿರೀಕ್ಷಿಸುತ್ತಿರುವವು. ಇಟಲಿಯು ತನ್ನ ವ್ಯಾಪಾರಬಲವನ್ನು ಹೆಚ್ಚಿಸುತ್ತಿದೆ. ಜರ್ಮನಿಯವರಿಂದ ಯುದ್ಧ ನಾವೆಗಳನ್ನು ಕೊಂಡುಕೊಂಡಿದೆ. ಅಬಿಸೀನಿಯಾದ ವಾಯುಬಲವೂ ಸಹ ಈಗ ಬಹಳ ಮಟ್ಟಿಗೆ ಸುಧಾರಿಸಲ್ಪಟ್ಟಿದೆ.

ರಾಷ್ಟ್ರಸಂಘದ ಸಭೆಯು ತೀರ್ಮಾನಗಳು ಹೊರಬೀಳುವ ವರೆಗೆ ಇಟಲಿಯು ಯುದ್ಧಕ್ಕೆ ಕೈಹಚ್ಚುವದಿಲ್ಲವಾಗಿ ಮುಸೋಲಿನಿಯವರು ಅಭಯವನ್ನಿತ್ತಿರುವರು.

ಕೋಳಿ ಮೊಟ್ಟೆ ಮತ್ತು ಹಳ್ಳಿಗಳ ಉದ್ಧಾರ.

(ಲೇಖಾಂಕ ೨)



(ಲೇಖಕ:—ಪಂಡಿತ ತಾರಾನಾಥರು.)

(ಇವರು 'ಪ್ರೇಮ' ಎಂಬ ತ್ರೈಮಾಸಿಕದ ಸಂಪಾದಕರು. ತುಂಗಭದ್ರದಲ್ಲಿರುವ 'ಪ್ರೇಮ ವಿದ್ಯಾ ಪೀಠ'ದ ಸಂಚಾಲಕರು, ಪ್ರೌಢ ವಿದ್ವನ್ಮಣಿಗಳು, ದೇಶಸೇವಾನಿರತರು. ಇವರು ಕೃಪೆಗೈದು ನಮ್ಮ 'ಕೊಡಗು' ಪತ್ರಿಕೆಗೆ ಆಗಿಂದಾಗ್ಗೆ ಉತ್ತಮ ಲೇಖನಗಳನ್ನು ಕಳುಹಿಸುತ್ತಿರುವರು. ಈಗಾಗಲೇ ಇವರ ಅನೇಕ ಲೇಖನಗಳು ನಮ್ಮ ವಾಚಕರ ಹಸ್ತಗತವಾಗಿರುವದು. ಇವರಿಗೆ ನಾವು ಅಭಾರ ಋಣಿಗಳಾಗಿದ್ದೇವೆ)

ಕೋಳಿಯ ಮೊಟ್ಟೆಗೆ ಏತಕ್ಕೆ ಪ್ರಾಮುಖ್ಯತೆಯನ್ನು ಕೊಡಬೇಕು ಎಂಬದನ್ನು ಹಲವು ರೀತಿಗಳಿಂದ ಪರೀಕ್ಷಿಸಬೇಕು. ಹಳ್ಳಿಯೂರುಗಳಲ್ಲಿಯ ಅನುಕೂಲತೆಯ ದೃಷ್ಟಿಯಿಂದ ಈ ಉದ್ಯಮವು ಬಹು ಸುಲಭವೆಂಬುದನ್ನು ಹಿಂದಿನ ಲೇಖದ ಮೂಲಕ ತೋರಿಸಿದ್ದಾಯಿತು. ಕೋಳಿಗಳನ್ನು ಕೊಂಡು ಅವುಗಳನ್ನಿಟ್ಟುಕೊಂಡು ಸಾಕಿ ಮೊಟ್ಟೆ ಮರಿಗಳನ್ನು ಬೆಳೆಸುವುದು ಅಗ್ಗ ಮತ್ತು ಸುಲಭ. ಆ ಮೇಲೆ ಇವುಗಳಿಂದಾಗುವ ಲಾಭವು ಒಳ್ಳೆಯದೇ; ಇಷ್ಟು ಮಾತ್ರವೇ ಅಲ್ಲ. ಆಹಾರ ತತ್ವದ ದೃಷ್ಟಿಯಿಂದ ಮೊಟ್ಟೆಯನ್ನು ಪರೀಕ್ಷಿಸಿದರೂ ಅದರ ಅಂತಸ್ತು ದೊಡ್ಡದೇ ಆಗಿದೆ. ಈಗಿಲ್ಲಿ ಈ ವಿಷಯವನ್ನೇ ಮೊದಲು ವಿವೇಚಿಸಬೇಕಾಗಿದೆ ಆದರೆ ಅದಕ್ಕೆ ಮೊದಲು ಆಹಾರ ತತ್ವದೃಷ್ಟಿ ಎಂದರೇನು ಎಂಬದನ್ನು ಸ್ವಲ್ಪದರಲ್ಲಿಯೇ ಹೇಳಿ ಮುಗಿಸುವುದುತ್ಕೃಷ್ಟವಲ್ಲವೇ?

ಜನ ಸಾಮಾನ್ಯಕ್ಕೆ ಸುಲಭವಾಗಿ ತಿಳಿಯುವಂತೆ ಹೇಳುವದಾದರೆ ಪ್ರತಿಯೊಂದು ಆಹಾರವನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. ಮೇಧ್ಯ ಮತ್ತು ಅಮೇಧ್ಯ. ಉಂಡ ಆಹಾರದ ಒಂದು ಭಾಗವು ದೇಹದ ರಕ್ತ ಮಾಂಸ ಇತ್ಯಾದಿ ಧಾತುಗಳೊಡನೆ ಸೇರಿ ಒಂದಾಗುತ್ತದೆ; ಇದು ಮೇಧ್ಯ. ಇನ್ನೊಂದು ಈ ಭಾಗದೊಡನೆ ಕೂಡಿ ಒಂದಾಗಿಯೆ ಇದ್ದರೂ ಹಾಗೆ ಧಾತುಗಳನ್ನು ಕೂಡಿ ಒಂದಾಗದೆ, ಹೊರಗೆ ಹಾಕಲ್ಪಡುತ್ತವೆ; ಇದು ಅಮೇಧ್ಯ ಭಾಗ. ಪ್ರಪಂಚದಲ್ಲಿ ಅನೇಕಾನೇಕ ಆಹಾರಗಳಿವೆ. ಅವುಗಳ ಯೋಗ್ಯತೆಯನ್ನು ಅಳೆಯುವದು ಹೇಗೆ? ಯಾವ ಆಹಾರದಲ್ಲಿ ಮೇಧ್ಯಾಂಶವು ಹೆಚ್ಚಾಗಿವೆಯೋ ಮತ್ತು ಯಾವ ಆಹಾರದಲ್ಲಿಯ ಈ ಮೇಧ್ಯಾಂಶವು ಶೀಘ್ರ ಮೇಧ್ಯ ಅಂದರೆ ಬೇಗ ಪಚನವಾಗಿ ಮೈಗೂಡುವಂಥಾದ್ದಾಗಿದೆಯೋ, ಅಂಥಾ ಆಹಾರವೇ ಉಚ್ಚ ತರಗತಿಯದು. ಆಹಾರ ಶಾಸ್ತ್ರವು ವಸ್ತುಗಳ ಬೆಲೆಕಟ್ಟುವದು ಈ ದೃಷ್ಟಿಯಿಂದಲೇ.

ಈ ಮೇಧ್ಯಾಂಶವನ್ನು ಮತ್ತೂ ಪೃಥಕ್ಕರಿಸಬೇಕಾಗುತ್ತದೆ. ಈ ವಿಭಜನವನ್ನು ಆಯುರ್ವೇದದ ಪಂಚಧಾತು ತತ್ವಾನುಸಾರವಾಗಿ ಮಾಡಬಹುದು. (ಅಂದರೆ ಮೇಧ್ಯದ ಯಾವ ಅಂಶವು ಯಾವ ಧಾತುವಿನ ವೃದ್ಧಿ ಮಾಡುವುದು ಎಂಬ ದೃಷ್ಟಿಯಿಂದ) ಆದರೆ ಈ ತತ್ವನಿರೂಪಣೆಯು ಬಹು ಗಹನವಾಗಿರೋಣದರಿಂದ ಆಹಾರ ತತ್ವ ವಿಭಜನವನ್ನು ಇಲ್ಲಿ ಸೌಲಭ್ಯಕ್ಕಾಗಿ ಪಾಶ್ಚಿವಾತ್ಯರ ಆರೋಗ್ಯ ಶಾಸ್ತ್ರ ವಿಧಾನದಿಂದ ಮಾಡುವದುತ್ತಮವೆಂದು ತೋರುತ್ತದೆ. ಅದರ ಕೆಲವು ಮುಖ್ಯ ಭಾಗಗಳನ್ನು ಮಾತ್ರ ಇಲ್ಲಿ ವಿವರಿಸಬಹುದು. ಉಂಡ ಆಹಾರದ ಮೇಧ್ಯಾಂಶವಿಭಜನವು ಈ ದೃಷ್ಟಿಯಿಂದ ನೋಡಿದರೆ ಹೀಗಾಗುವದು.

1. ಅಮೇಧ್ಯಾಂಶ. (Refuse)

2. ಮೇಧ್ಯಾಂಶ (Assimilable part)

1.	2.	3.	4.	5.
Protein	Minaral Salts	Carbo hydrates	Fat	Water

ಮೇಧ್ಯಗಳ ಒಂದೊಂದು ಭಾಗವನ್ನೂ ತಿಳಿದುಕೊಳ್ಳೋಣ. (1) ಪ್ರೊಟೀನ್—ಇದು ಮಾಂಸ ವರ್ಧಕ. (2) ಕ್ಷಾರಗಳು—ಇವು ಹಲವು ಜಾತಿಯವುಗಳಿವೆ. ದೇಹದ ಎಲ್ಲಾ ವ್ಯಾಪಾರಗಳನ್ನೂ ಇವುಗಳಲ್ಲೊಂದೊಂದು ಒಂದೊಂದು ರೀತಿಯಲ್ಲಿ ಸೂಕ್ಷ್ಮರೂಪವಾಯದಿಂದ ನಡೆಸುವದು. ಇವುಗಳಲ್ಲಿ ಕೆಲ್‌ಸಿಯಮ್ (Calcium) ಸುಂಣದ ಧಾತು, ಕಬ್ಬಿಣ, ಫೊಸ್ಫೇಟ್ಸ್ (ಕ್ಷೀಜೋವರ್ಧಕ ಕ್ಷಾರಗಳು,) ಬಹು ಮುಖ್ಯ. (3) ಕಾರ್ಬೋಹ್ಯಾಡ್ರೇಟ್—ಹಿಟ್ಟು ಸಕ್ಕರೆಗಳಲ್ಲಿ ಹೆಚ್ಚಾಗಿರುವಂಥಾದ್ದು. ಇದು ದೇಹೋಷ್ಣವನ್ನು ಹುಟ್ಟಿಸುವಂಥಾದ್ದು. ಯಂತ್ರ ನಡೆಸಲಿಕ್ಕೆ ಎಂಥೆ, ಕೊಬ್ಬು—ಇದೂ ಹಿಟ್ಟು ಸಕ್ಕರೆಗಳಂತೆ ಉಷ್ಣೋತ್ಪಾದಕವೇ. ಇದು ಸ್ವಲ್ಪ ಪ್ರಮಾಣದಿಂದಲೂ ಹೆಚ್ಚಿನ ಉಷ್ಣತೆಯನ್ನುಂಟುಮಾಡುವದು. ಸ್ನಿಗ್ಧತೆಯನ್ನೂ ಉಂಟುಮಾಡುವುದು. (4) ಇದು ಶುದ್ಧ ನೀರು. ಇದು ದೇಹದ ಸಕಲ ದ್ರವ್ಯಧಾತುಗಳಿಗೂ ಅನುಕೂಲ. ಮುಖ್ಯವಾಗಿ ರಕ್ತಕ್ಕೆ. ಅಮೇಧ್ಯಾಂಶ ವಿವೇಚನಕ್ಕೆ ಮತ್ತು ದೇಹ ಶುದ್ಧಿಗೆ ಇದೂ ಕ್ಷಾರಗಳೂ ಮುಖ್ಯವಾಗಿ ಬೇಕು.

ಈಗ ಹಲವು ಆಹಾರ ವಸ್ತುಗಳನ್ನು ಪರೀಕ್ಷಿಸಿ ನೋಡೋಣ.

* ಆಹಾರಗಳು.	ಪ್ರೊಟೀನ್	ಕ್ಷಾರ	ಕಾರ್ಬೋ-ಹ್ಯಾಡ್ರೇಟ್ಸ್	ಕೊಬ್ಬು	ನೀರು
ಹಾಲು	3 3	.7	5	4	87
ಬೆಣ್ಣೆ	1	3	-	83	13
ಗೋಧಿ	11.4	.5	75 5	1	12
ಒಟಾಟೆ	1.8	.8	14.7	.1	62.8
ಬಾದಾಮಿ	21.4	2.5	16 8	54 4	49
ತೆಂಗಿನಕಾಯಿ	6.3	1.6	21.2	56.2	13
ನೆಲಗಡಲೆ	29.8	2 2	17.1	43.5	7 4
ಮೊಟ್ಟೆ	11.9	9	—	9.3	65.5

ಹಳ್ಳಿಯ ಉದ್ಯಮಗಳನ್ನು ಕುರಿತು ಚರ್ಚಿಸುವಾಗ ಇಲ್ಲಿ ಮುಖ್ಯವಾಗಿ ತಿಳಿಯಬೇಕಾದ ವಿಷಯಗಳು ಅಂದರೆ ಹಾಲು ಮತ್ತು ಮೊಟ್ಟೆ ಎಂಬುದು ವಾಚಕರಿಗೆ ತಿಳಿದ ವಿಷಯವೇ ಆಗಿದೆ. ಇವು ಸರ್ವೋತ್ಕೃಷ್ಟ ಆಹಾರಗಳು ಎಂದು ತಜ್ಞರ ಮತ. ಇನ್ನೊಂದು ಮಾತು· ಹಾಲಿನೊಡನೆ ಅದನ್ನು ಕೊಡುವ ದನ, ಕುರಿ, ಆಡುಗಳ ಮತ್ತು ಅವುಗಳ ಮಾಂಸಗಳ ವಿಷಯವೂ ಅನುಗತವಾಗಿ ಬರುತ್ತದೆ. ನಮ್ಮ ಹಳ್ಳಿಗಳಲ್ಲಿ ಸಾಧಾರಣವಾಗಿ ಉಪಯೋಗಿಸುವುದು ಕುರಿ ಆಡುಗಳ ಮಾಂಸವೇ. ಹಾಗೆಯೇ ಮೊಟ್ಟೆಯೊಡನೆ ಅವುಗಳನ್ನಿಡುವ ಕೋಳಿಗಳೂ, ಬಾತುಗಳೂ ಅನುಗತವಾಗಿ ಬರುತ್ತವೆ. ಕೋಳಿ ಕುರಿಗಳ ಮಾಂಸಗಳ ಮೇಧ್ಯ ತತ್ವಗಳು ಹೆಚ್ಚು ಕಡಮೆ ಒಂದೇ ಆಗಿರೋಣದರಿಂದ ನಾವಿಲ್ಲಿ ಒಟ್ಟಾರೆ ಮೇಲೆ ಹೋಲಿಸಬೇಕಾದವುಗಳು ಅಂದರೆ 1 ಹಾಲು, 2 ಮಾಂಸ, 3 ಮೊಟ್ಟೆ. ಪ್ರೊಟೀನ್ ಮತ್ತು ಕೊಬ್ಬು (ಮಾಂಸೋಚ್ಚಾರಕ ಮತ್ತು ಊಷ್ಮೋತ್ಪಾದಕ) ಈ ಎರಡು ಮುಖ್ಯ ಅಂಶಗಳ ದೃಷ್ಟಿಯಿಂದ ಹೋಲಿಸಿ ನೋಡಿದರೆ:—

ಒಂದು ಮೊಟ್ಟೆ=ಸುಮಾರು ಮುಕ್ಕಾಲು ತೊಲೆ ಮಾಂಸ—ಹೆಚ್ಚಾರಡುವರೆ ತೊಲೆ ಹಾಲು.

ಈ ಒಂದರಿಂದಲೇ ಮೊಟ್ಟೆಯ ಯೋಗ್ಯತೆಯು ಒಡೆದು ಕಾಣುವುದಿಲ್ಲವೇ? ಬೆಲೆಗಳ ದೃಷ್ಟಿಯಿಂದಲೂ ಯಾವುದು ಅಗ್ಗ ಎಂದು ನೋಡಿರಿ.

ಮೊಟ್ಟೆಯಲ್ಲಿ ಸಕಲ ಆಹಾರ ತತ್ವಗಳೂ ಸಂಪೂರ್ಣವಾಗಿವೆ. ಅದರ ಬಿಳಿಯಲ್ಲಿ ನೀರಿನ ಅಂಶವೇ ಹೆಚ್ಚು. ಹತ್ತರಲ್ಲೊಂದು ಭಾಗದಷ್ಟು ಅಲ್ಬ್ಯುಮೆನ್ (ಇದು ಮಾಂಸವರ್ಧಕ ಭಾಗ) ಮಾತ್ರ ಅದರಲ್ಲಿದೆ. ಅದರ ಹಳದಿಯಲ್ಲಿರುವ ಕೊಬ್ಬು ಬಹಳ ಉಚ್ಚ ತರಗತಿಯದ್ದು ನಿರ್ದುಷ್ಟವಾದದ್ದು. ಶೀಘ್ರ ಅರಗುವಂಥಾದ್ದು ಮೊಟ್ಟೆಗಳಲ್ಲಿ ಕೆಲ್ಸಿಯಮ್ ಫೊಸ್ ಫೊರಸ್ ಮತ್ತು ಕಬ್ಬಿಣ ಧಾರಾಳವಾಗಿವೆ. ಅದರ ಹಳದಿ ಭಾಗದಲ್ಲಿ ಇವು ಹೆಚ್ಚು. ಈ ಎಲ್ಲಾ ಪ್ರಸ್ಥಾನಗಳಿಂದಲೂ ಅನುಭವದಿಂದಲೂ ನೋಡಿದರೆ ಈ ಮೊಟ್ಟೆಯು ಬಹು ಯೋಗ್ಯ ಆಹಾರವೆಂದು ತೋರುತ್ತದೆ. ಹಾಲನ್ನೊಂದು ಬಿಟ್ಟರೆ ಇನ್ನಾವ ವಸ್ತುವಿನಲ್ಲೂ ಇದರಲ್ಲಿರುವಷ್ಟು ಕೆಲ್‌ಸಿಯಮ್ ಎಂಬ ಧಾತುವು ಇಲ್ಲ ಇದೇ ಎಲುಬು ಹಲ್ಲುಗಳ ಜೀವ ಜೀವಾಳ. ಇಷ್ಟೇ ಅಲ್ಲ ಇದರಲ್ಲಿ ಮತ್ತು ಹಾಲಿನಲ್ಲಿರುವ ಕೆಲಸಿಯಮ್ ಫೊಸ್‌ಫೊರಸ್ ಕಬ್ಬಿಣ ಮುಂತಾದ ತತ್ವಗಳು ಬೇಗನೇ ಮೈಗೂಡುವಂತೆ ಇನ್ನಾವುಗಳಲ್ಲಿರುವವೂ ಮೈಗೂಡುವದಿಲ್ಲ. ಇನ್ನೂ ವಿಶೇಷವೇನೆಂದರೆ ಮೊಟ್ಟೆಯೊಳಗಣ ಬಿಳಿಹಳದಿ ಎಲ್ಲವೂ ಮೇಧ್ಯವೇ. ಸಂಪೂರ್ಣವಾಗಿ ಮೈಗೂಡುವವೇ.

x x x x x x x

ಮೊಟ್ಟೆಯನ್ತುಂಬುವದು ಹಿಂಸೆಯಲ್ಲವೇ? ಎಂದು ಒಂದು ಪ್ರಶ್ನೆ ಬರಬಹುದು. ಶಾಸ್ತ್ರೋಕ್ತವಾಗಿ ತತ್ವ ನಿರ್ಣಯ ಮಾಡುವಾಗ ಅಭ್ಯಾಸ ಬಲವು ವಿಚಾರದ ಗತಿಗೆ ಮಾತ್ರ ಅಡ್ಡಕಾಲು ಹಾಕಬಾರದು. ಈ ವಿಷಯವನ್ನೂ ಆರ್ಥಿಕ ಲೆಕ್ಕಾಚಾರ ಮತ್ತು ಆದಾಯಗಳನ್ನೂ ಇನ್ನು ಮುಂದೆ ಪರೀಕ್ಷಿಸಲಾಗುವುದು. [ಸಶೇಷ.]

* ಈ ಪಟ್ಟಿಯಲ್ಲಿ ಆಹಾರದ ಗುಂಪು ಭಾಗಗಳಲ್ಲಿ ಮೇಧ್ಯಾಂಶಗಳ ಲಿಪ್ತಿಂದೊಂದು ಇಷ್ಟಿಷ್ಟು ಎಂದು ತಿಳಿಯಬೇಕು. ಮೂದರಿಗಾಗಿ ಕೆಲವು ಮುಖ್ಯ ವಸ್ತುಗಳನ್ನು ಮಾತ್ರ ಕೊಡಲಾಗಿದೆ. ಹೆಚ್ಚಿನ ಮಾಹಿತಿ ಬೇಕಾದವರು ಶ್ರೀ. ವೈದ್ಯಭಾನು ಡಿ. ಕೆ. ಭಾರದ್ವಾಜರ "ಆಹಾರ ವಿಜ್ಞಾನ" ವೆಂಬ ಪುಸ್ತಕವನ್ನೂ ಓದುವದು ಒಳ್ಳೆಯದು.

ಗಂಧದ ಕರಡು ನಿಬಂಧನೆ ನಿಷೇಧ.

ತಾ 4-9-35ರಲ್ಲಿ ಕೊಡಲಿಪೇಟೆ ಬಸವೇಶ್ವರ ದೇವಸ್ಥಾನದಲ್ಲಿ ನಡೆದ ವಿಶೇಷಿಂಗಿನ ಪ್ರೊಸಿಡಿಂಗ್ಸ್:

ಈ ಸಭೆಗೆ ಸುಮಾರು 30 ಗ್ರಾಮಗಳಿಂದ 120 ಜನಗಳವರೆಗೆ ಸೇರಿದ್ದರು. ಈ ದಿನದ ಸಭೆಗೆ ಮ. ರಾ. ಊರುಗುತ್ತಿ ಬಸಪ್ಪನವರನ್ನು ಅಧ್ಯಕ್ಷರಾಗಬೇಕೆಂದು ಮ. ರಾ. ಕಲ್ಲಹಳ್ಳಿ ಶಿದ್ದಬಸಪ್ಪ ಶೆಟ್ಟರು ಸೂಚಿಸಿದರು. ಮ. ರಾ. ಹಂಡ್ಲಿ ಚೆನ್ನಮಲ್ಲಪ್ಪನವರು ಅನುಮೋದಿಸಿದರು. ಸಭೆಯವರೆಲ್ಲರೂ ಸರ್ವಾನುಮತದಿಂದ ಒಪ್ಪಿದರು. ಅನಂತರ ಮ. ರಾ. ಊರುಗುತ್ತಿ ಬಸಪ್ಪನವರು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡು ಕಾಲೋಚಿತವಾದ ಒಂದೆರಡು ಮಾತುಗಳನ್ನಾಡಿ ಈ ದಿನ ಇಲ್ಲಿ ಸಭೆ ಸೇರಿರುವದು ಹಾಲಿ 1935 ನೇ ಇಸವಿ ಜುಲೈ ತಿಂಗಳ ಕೊಡಗು ಗೆಜೆಟಿನಲ್ಲಿ ಪ್ರಕಟವಾಗಿರುವ ನಂಬ್ರ 67 ತಾ. 28-6-35 ರ ಅನ್‌ರಿಡೀಮ್ಡ್ ಜಾಗಗಳಲ್ಲಿನ ಗುಂಧದ ಮರಗಳಿಗೆ ಬೋನಸ್ ಕೊಡುವ ಒಂದು ಹೊಸ ಕ್ರಮವನ್ನು ಜಾರಿಗೆ ತರಲು ಒಂದು ಕರಡು ನಿಬಂಧನೆ ಏರ್ಪಾಡಾಗಿರುವೆದನ್ನು ಸಭಿಕರು ಪರ್ಚಿಸಿ ಅದರ ಸಾಧಕ ಬಾಧಕಗಳನ್ನು ಸರಕಾರದವರಿಗೆ ತಿಳಿಸಲಿಕ್ಕೆಂದು ವಿವರಿಸಿದರು.

ಮತ್ತು ಸದರಿ ಕರಡು ನಿಬಂಧನೆಯನ್ನು ಓದಿ ಹೇಳಲು ಮ. ರಾ. ಕೃಷ್ಣಪ್ಪನವರನ್ನು ಕೇಳಿಕೊಳ್ಳಲಾಗಿ ಅವರು ಸದರಿ ಕರಡು ರೂಲುಗಳು ಕನ್ನಡದಲ್ಲಿ 30—8—35 ರ ಕೊಡಗು ಮತ್ತು 28—8—35 ರ ಜನ್ಮಭೂಮಿ ಪತ್ರಿಕೆಯಲ್ಲಿ ಪ್ರಕಟವಾಗಿರುವದನ್ನು ಓದಿ ವಿವರಿಸಿದರು.

(1) ಸಭಿಕರೆಲ್ಲರೂ ಸದರಿ ಕರಡುನಿಬಂಧನೆಗಳ ಷರತ್ತುಗಳನ್ನು ಒಂದೊಂದಾಗಿ ಚರ್ಚಿಸಿ, ಆ ಪ್ರತಿಯೊಂದು ಷರತ್ತಿನಿಂದಲೂ ರೈತನಿಗೆ ಕಷ್ಟ, ನಷ್ಟಗಳೇ ಅಲ್ಲದೆ ಇಲ್ಲದ ಜವಾಬ್ದಾರಿಯೂ ಪ್ರಾಪ್ತವಾಗುವಂತೆ ಕಾಣುವುದರಿಂದ ಈ ಷರತ್ತುಗಳನ್ನೆಲ್ಲ ಖಾನೂನು ಜಾರಿಗೆ ತರಲೇ ಕೂಡದೆಂತ ಸಭೆಯವರೆಲ್ಲರೂ ನಿಷೇಧಿಸಿದ ಮೇರೆ 'ಜರ್ಜರ್ವಾಸ್ಪದವಾದ ಮೇಲ್ಕಂಡ 67 ನಂಬ್ರ, ತಾ. 28—6—35 ನೇ ನೋಟಿಫಿಕೇಷನ್ ಜಾರಿಗೆ ತರಕೂಡದೆಂದು ಹಜರತ್ ಚೀಫ್ ಕಮಿಷನರ್ ಸಾಹೇಬರವರಿಗೆ ಒಡನೆ ಬರೆಯಬೇಕೆಂದು ಮ. ರಾ. ಕಲ್ಲಹಳ್ಳಿ ಶಿದ್ದಬಸಪ್ಪ ಶೆಟ್ಟರು ಸೂಚಿಸಲಾಗಿ ಮ. ರಾ. ಕೆರೆಕೇರಿ ಗೌಡೇಗೌಡರು ಅನುಮೋದಿಸಿದ ನಂತರ ಒನ್ಮತದಿಂದ ಒಪ್ಪಲ್ಪಟ್ಟಾಯಿತು.

(2) ಈಗ ರಿಡೀಮ್ಡ್ ಜಾಗಗಳಲ್ಲಿರುವ ಗಂಧದ ಮರಗಳಿಗೆ ಸಿಕ್ಕುತ್ತಿರುವಂತೆಯೇ ಅಂದರೆ 75% ರಂತೆ ಅನ್‌ರಿಡೀಮ್ಡ್ ಜಾಗದ ಗುಂಧದ ಮರಗಳಿಗೂ ಪ್ರತಿಫಲ ಕೊಡಬೇಕೆಂಬ ಪ್ರಸ್ತಾವನ್ನು ಮ. ರಾ. ಬೆಲ್ಲದ ಸೋಮಯ್ಯನವರು ಸಭೆಯ ಮುಂದಿಡಲಾಗಿ ಮೆ. ಊರುವತದ ಶಾಂತಪೀರಸ್ವಾಮಿಯವರು ಅನುಮೋದಿಸಿದ ಮೇರೆ ಒಮ್ಮತದಿಂದ ಒಪ್ಪಲಾಯಿತು.

(3) ಗಂಧದ ಮರಗಳನ್ನು ಕಾಪಾಡುವ ಯಾವ ಷರತ್ತನ್ನೂ ನಿರ್ಬಂಧನವನ್ನೂ ರೈತರ ಮೇಲೆ ಸರ್ಕಾರದವರು ಹೊರಿಸಲಾಗದೆಂತ ಮ. ರಾ. ಯಂಗೆಗದ್ದೆ ಅಪ್ಪಯ್ಯನವರು ಸೂಚಿಸಿದ್ದನ್ನು ಮ. ರಾ. ಮೂವಿನಹಳ್ಳಿ ಶಿದ್ದಬಸಪ್ಪ ಶೆಟ್ಟರು ಅನುಮೋದಿಸಿದನಂತರ ಸರ್ವಾನುಮತದಿಂದ ತೀರ್ಮಾನವಾಯಿತು.

(4) ಗಂಧದ ಮರ ಹೆಚ್ಚಾಗಿ ಬೆಳೆಯುವ ಪ್ರದೇಶದ ರೈತರಿಂದ ಚುನಾಯಿಸಲ್ಪಟ್ಟ ಜಾಸಗೀ ಮೆಂಬರುಗಳ ಮೆಜಾರ್ಟಿಯಸ್ಸಿನಳಗೊಂಡ ಮತ್ತು ಕೌನ್ಸಿಲ್ ಮೆಂಬರುಗಳೂ, ಸರ್ಕಾರಿ ಮೆಂಬರುಗಳೂ ಸೇರಿದಂಥ ಒಂದು "ಕಮಿಟಿಯನ್ನು ಏರ್ಪಡಿಸಿ ಅದರ ಮೂಲಕ ನಿರ್ಧರಿಸಿದರೂ ಆಗಬಹುದೆಂಬ ಠರಾವನ್ನು ಮೆ. ಹಂಡ್ಲಿ ಚೆನ್ನಮಲ್ಲಪ್ಪನವರು ಸೂಚಿಸಿದ್ದನ್ನು ಮೆ. ಯಂಗೆಗದ್ದೆ ಅಪ್ಪಯ್ಯನವರು ಅನುಮೋದಿಸಿದನಂತರ ಮೆ. ಕೆ. ವೆಂಕಟರಮಣ ಶೆಟ್ಟರು ವಿರೋಧಿಸಿ ಕಮಿಟಿ ಬೇಡವೆಂತ ಹೇಳಿದರು. ಅದರ ಮೇಲೆ ಸ್ವಲ್ಪ ಚರ್ಚೆ ನಡೆದು ಈ ಠರಾವನ್ನು ಓಟಿಗೆ ಹಾಕಲಾಗಿ ವಿರೋಧಿಸಿದವರ ಹೊರತು ಉಳಿದವರೆಲ್ಲರೂ ಒಪ್ಪಿ ಕಮಿಟಿ ಆಗಬೇಕೆಂತಲೇ ಬಹುಮತದಿಂದ ತೀರ್ಮಾನವಾಯಿತು.

(5) ಈ ಮಸೂದೆಗೆ ಕೊಟ್ಟಿರುವ 3 ತಿಂಗಳ ಅವಧಿ ಮುಗಿಯುತ್ತಾ ಬಂದಿರುವುದರಿಂದಲೂ, ಈ ಸಂಗತಿಯು ಹೆಚ್ಚು ಮಹತ್ವದ್ದಾದ್ದರಿಂದಲೂ ಆಲೋಚನೆ ಮಾಡಿ ಸೂಚನೆ ಕೊಡಲು ಒಂದು ವರ್ಷ ಬೇಕೆಂದು ಚೀಫ್ ಕಮಿಷನರ್ ಸಾಹೇಬರನ್ನು ಕೇಳಿಕೊಳ್ಳಬೇಕಲ್ಲದೆ ಈ ಠರಾವುಗಳೆಲ್ಲವನ್ನೂ ಹಜರತ್ ಚೀಫ್ ಕಮಿಷನರ್ ಸಾಹೇಬರವರಿಗೂ, ಕಮಿಷನರ್ ಸಾಹೇಬರವರಿಗೂ, ಚೀಫ್ ಫಾರೆಸ್ಟ್ ಆಫೀಸರವರಿಗೂ ಸ್ಥಳೀಯ 'ಕೊಡಗು' ಮತ್ತು 'ಜನ್ಮಭೂಮಿ' ಪತ್ರಿಕೆಗಳಿಗೂ ಈ ಸಭಾಧ್ಯಕ್ಷರು ಕಳುಹಿಸಿಕೊಡಬೇಕೆಂದು ಮೆ. ಮೂವಿನಹಳ್ಳಿ ಶಿದ್ದಬಸಪ್ಪನವರು ಸೂಚಿಸಿದನ್ನು ಸಭೆಯವರೆಲ್ಲರೂ ಅನುಮೋದಿಸಿ ಮಂಜೂರು ಮಾಡಿದರು

(6) ಈ ಗಂಧದ ಮರದ ವಿಷಯವು ಅತೀ ಮಹತ್ವದ್ದೂ, ಜರೂರೂ ಆದ್ದರಿಂದ ಈ ಬಗ್ಗೆ ಹಜರತ್ ಚೀಫ್ ಕಮಿಷನರ್ ಸಾಹೇಬರವರಲ್ಲಿಗೆ ಒಂದು ಡೆಪ್ಯುಟೇಶನ್ ಆದಷ್ಟು ಶೀಘ್ರದಲ್ಲಿಯೇ ಹೋಗಬೇಕೆಂತ ಮೆ. ಕಲ್ಲಹಳ್ಳಿ ಶಿದ್ದಬಸಪ್ಪ ಶೆಟ್ಟರು ಸೂಚಿಸಿದನ್ನು ಸಭಿಕರೆಲ್ಲರೂ ಏಕ ಮನಸ್ಸಿನಿಂದ ಒಪ್ಪಿದರು. ಈ ಡೆಪ್ಯುಟೇಶನ್ನಿಗೆ ಕೊಡ್ಲಿಪೇಟೆಯಿಂದ ಮೆ. ಬಾವ ಯೆನೆ ಬುಡನ್ ಸಾಹೇಬರವರನ್ನು ಒಂದು ಮೆಂಬರಾಗಿ ಸಭಿಕರೆಲ್ಲರೂ ಚುನಾಯಿಸಿದರು. ಯು. ಬಸಪ್ಪ,

(ಅಧ್ಯಕ್ಷ.)

ಕೊಡಗು

ಸಪ್ಟಂಬರ್ ತಾ ೧೬ ನೇ ಶುಕ್ರವಾರ ೧೯೩೪.

ಪಿ. ಡಬ್ಲ್ಯೂ. ಇಲಾಖೆಯ ಸಿಬ್ಬಂದಿ.

ದೇಶದಲ್ಲಿ ಉಂಟಾಗಿರುವ ಆರ್ಥಿಕ ಮುಗ್ಗಟ್ಟಿನ ದೆಸೆಯಿಂದ ವ್ಯವಸಾಯಗಾರರು ಬಹು ಮಟ್ಟಿಗೆ ಕಷ್ಟನಷ್ಟಗಳಿಗೆ ಈಡಾಗಿರುವುದರಿಂದ ಅವರಿಗೆ ಕಂದಾಯ ಮೊಫಿಯ ರೂಪದಲ್ಲಿಯೂ, ಇತರ ಧನ ಸಹಾಯ ರೀತಿಗಳಲ್ಲಿಯೂ ಅವರ ಸಾಹಾಯ ಬೇಕೆಂದು ಕೇಳಿಕೊಳ್ಳುವಾಗ್ಯೆ ಸರ್ಕಾರಿ ಅಧಿಕಾರಿಗಳು ಕೌನ್ಸಿಲ್ ಸಭೆಗಳಲ್ಲಿಯೂ, ಇತರ ಕಡೆಗಳಲ್ಲಿಯೂ, ರೈತರು ಈ ಮೊದಲು ಅಭ್ಯಾಸ ಮಾಡಿರುವ ದುಂದುಗಾರಿಕೆಯ ಖರ್ಚನ್ನು ಬಿಟ್ಟು ತಮ್ಮ ಉತ್ಪತ್ತಿಗೆ ಸೇರೂದ ಖರ್ಚನ್ನು ಮಾಡಬೇಕಂತಲೂ, ಹಾಗೆ ಮಾಡದೆ ಹೋದರೆ ಸರ್ಕಾರದ ಅಲ್ಪಸ್ವಲ್ಪ ಸಹಾಯದಿಂದ ಪ್ರಯೋಜನವೇನೂ ಆಗಲಾರದೆಂತಲೂ ಮುಂತಾಗಿ ಹೇಳಿದ್ದು ಒನರಿಗೆ ತಿಳಿದ ವಿಷಯವಾಗಿದೆ. ರೈತರಿಗಿಂತ ಹೆಚ್ಚು ವಿದ್ಯಾವಂತರೂ, ಬುದ್ಧಿವಂತರೂ ಎಂದಿನ್ನಿಸಿಕೊಳ್ಳುವ ಉದ್ಯೋಗಸ್ಥರಿಂದ ಕೂಡಿದ ಸರ್ಕಾರದವರು ಗ್ರಾಮಸ್ಥರಿಗೆ ಹೀಗೆ ನಯ ನುಡಿಗಳಿಂದ ಬೋಧಿಸುತ್ತಾ, ಆಡಳಿತ ಕ್ರಮದಲ್ಲಿ ತಾವು ಹೇಗೆ ವರ್ತಿಸುತ್ತಿರುವರೆಂಬುದನ್ನು ವಿಚಾರಿಸಿದರೆ ಯಾರಿಗೆ ತಾನೇ ಆಶ್ಚರ್ಯವಾಗದಿರುವದು. ಗಂಧದ ಉತ್ಪತ್ತಿಯೂ, ಅಬ್ಕಾರಿ ಇಲಾಖೆಯ ಉತ್ಪತ್ತಿಯೂ ಹೆಚ್ಚಿದ್ದಾಗ್ಯೆ ಸರ್ಕಾರದವರು ದೊಡ್ಡ ಸಂಬಳದ ಹಲವು ಉದ್ಯೋಗಸ್ಥರನ್ನು ನೇಮಿಸಿ, ಬೇರೆಲ್ಲಿಯೂ ಇಲ್ಲದಂಥ ಕಲೆಭಾರದ ಆಡಳಿತ ಪದ್ಧತಿಯನ್ನು ಜಾರಿಗೆ ತಂದರು. ಫಾರೆಸ್ಟ್ ಮತ್ತು ಅಬ್ಕಾರಿ ಇಲಾಖೆಗಳ ಆದಾಯವು ಕಡಿಮೆಯಾಗುತ್ತಾ ಬಂತು. ಸರ್ಕಾರದವರು ನೆಪ ಮಾತ್ರಕ್ಕೆ ಸಿಬ್ಬಂದಿ ಖೋತೆಯ ಕಮಿಟಿಯನ್ನು ನೇಮಿಸಿ, ಅಲ್ಪ ಸ್ವಲ್ಪ ಒದಲಾವಣೆಗಳನ್ನು ಮಾಡಿದರು. ಮುಖ್ಯವಾಗಿ ಉದ್ಯೋಗಸ್ಥರ ಪ್ರಯೋಜನದ ಭತ್ಯವನ್ನು ಕಡಿಮೆ ಮಾಡಿದರು. ಆದರೆ ಇತ್ತೀಚೆಗೆ ಈ ಬಾಬಿನ ಖರ್ಚು ಮೊದಲಿನದಕ್ಕೇ ಆಗುತ್ತಿದೆಯೆಂದರೆ ತಪ್ಪಾಗಲಾರದು. ವರ್ಷಗಳು ದಾಟುತ್ತಾ ಬಂದ ಹಾಗೆ ಕೊಡಗಿನ ಸರ್ಕಾರದ ವೆಚ್ಚವು ಆದಾಯವನ್ನು ಎಸೆಯುತ್ತಾ ಒರುತ್ತಿದೆ. ಕಳೆದ ಜೂನ್ ತಿಂಗಳ ಅಖೈರಿನಲ್ಲು ಖರ್ಚು ಉತ್ಪತ್ತಿಗಿಂತ 89 ಸಾವಿರ ರೂಪಾಯಿ ಹೆಚ್ಚಾಗಿದೆಯೆಂದು ಗೆಜೆಟಿನಲ್ಲಿ ಪ್ರಕಟವಾಗಿದೆ. ಸರ್ಕಾರದ ಆರ್ಥಿಕ ಸ್ಥಿತಿಯು ಇಷ್ಟು ಕೆಟ್ಟು ಹೋಗಿದ್ದರೂ ಕೂಡ ಅವರು ರೈತರಿಗೆ ಬೋಧಿಸುವಂತೆ ದುಂದುಗಾರಿಕೆಯ ಖರ್ಚನ್ನು ಕಡಿಮೆ ಮಾಡದಿರುವುದು ಶೋಚನೀಯವಾಗಿದೆ.

ಉದಾಹರಣೆಗಾಗಿ ಪಬ್ಲಿಕ್ ವರ್ಕ್ಸ್ ಇಲಾಖೆಯನ್ನು ತೆಗೆದುಕೊಳ್ಳುವ. ಸಾಕಷ್ಟು ಉತ್ಪತ್ತಿ ಇಲ್ಲದೆ ಯಥೇಚ್ಛವಾಗಿ ಖರ್ಚಾಗುತ್ತಿರುವ ಇಲಾಖೆಯೇ ಪಿ. ಡಬ್ಲ್ಯೂ. ಡಿಪಾರ್ಟ್‌ಮೆಂಟ್. ಕೂಡಗಿನಂಥ ಚಿಕ್ಕ ಪ್ರದೇಶಕ್ಕೆ ಈ ಇಲಾಖೆಯಲ್ಲಿ ಮೂರು ದೊಡ್ಡ ಉದ್ಯೋಗಸ್ಥರುಗಳ ಅವಶ್ಯಕತೆ ಇಲ್ಲವೆಂದೂ, ಅದು ಬರೇ ದುಂದುಗಾರಿಕೆಯೆಂದೂ ಜನರ ಪ್ರತಿನಿಧಿಗಳು ಹೇಳಿದ್ದಕ್ಕೆ ಅಧಿಕಾರಿಗಳು ಮೊದಲು ಗಮನ ಕೊಡದಿದ್ದರೂ, ಇತ್ತೀಚೆಗೆ ಖರ್ಚಾನೆಯು ಬರಿದಾಗುತ್ತಾ ಬರುವುದನ್ನು ಕಂಡಾಗ್ಯೆ ಆ ಮೂರು ಉದ್ಯೋಗಗಳಲ್ಲಿ ಒಂದನ್ನು ತೆಗೆದು ಹಾಕಿದರು. ಒಬ್ಬ ಉದ್ಯೋಗಸ್ಥನಿಂದಲೇ ನಡಿಸಬಹುದಾದ ಕೆಲಸಗಳಿಗೆ ಮೂವರನ್ನು ಇಟ್ಟುಕೊಳ್ಳುವದು ದುಂದುಗಾರಿಕೆಯೆಂದು ಮನವರಿಕೆಯಾಗಿಯೋ ಅಥವಾ ಆರ್ಥಿಕ ಮುಗ್ಗಟ್ಟಿನ ದೆಸೆಯಿಂದಲೋ ಸರ್ಕಾರದವರು ಒಂದು ಉದ್ಯೋಗವನ್ನು ಕಡಿಮೆ ಮಾಡಿದ್ದೆಂದು ಗೊತ್ತಾಗಲಿಲ್ಲ. ಅವರು ಒಬ್ಬರನ್ನು ತೆಗೆದು ಹಾಕಿದ ಮೇಲೆ ಉಳಿದ ಇಬ್ಬರಿಂದ ಇಲಾಖೆಯ ಕೆಲಸಗಳು ಕಾರ್ಯದಕ್ಷತೆಯಿಂದಲೂ, ಕಡಿಮೆ ವೆಚ್ಚದಿಂದಲೂ ನಡಿಯುವಂತೆ ಏರ್ಪಾಡು ಮಾಡಲಾಗುವದೆಂದು ಆಶಿಸಲಾಗಿತ್ತು. ಆದರ ಬದಲು, ಹೊಸ ಏರ್ಪಾಡಿನಿಂದ ಮೇಲಿನ ಉದ್ದೇಶವು ಸಾಕಷ್ಟು ಮಟ್ಟಿಗೆ ಸಾಧಿಸಲ್ಪಡಲಿಲ್ಲವೆಂದೇ ಕಂಡುಬರುತ್ತದೆ.

ಮೊದಲೊವ್ಕೆ ಒಬ್ಬ ಸಬ್ ಡಿವಿಜನಲ್ ಆಫೀಸರ ಹುದ್ದೆಯನ್ನು ತೆಗೆದು ಹಾಕಿದ್ದಾಗ್ಯೆ, ಉಳಿದ ಸಬ್ ಡಿವಿಜನಲ್ ಆಫೀಸರನ್ನು ದಕ್ಷಿಣ ಕೊಡಗಿಗೆ ನೇಮಿಸುವುದರ ಬದಲು ಎಗ್ಸಿಕ್ಯುಟಿವ್ ಇಂಜಿನಿಯರವರ ಹೆಡ್ಡಾಫೀಸಿರುವ ಉತ್ತರ ಕೊಡಗಿಗೇನೇ ನೇಮಿಸಿ, ಅದರಿಂದ ಇಲಾಖೆಯ ಕೆಲಸವು ಕ್ರಮವಾಗಿ ನಡೆಯಲಿಲ್ಲವೆಂದು ಹೇಳಿ, ಮತ್ತೆ ಪುನಹ ಇಬ್ಬರು ಸಬ್ ಡಿವಿಜನಲ್ ಆಫೀಸರುಗಳನ್ನು ನೇಮಿಸಿದರು. ಆದರೆ ಪುನಹ ಹಣದ ಅಭಾವದಿಂದ ಒಬ್ಬ ಸಬ್ ಡಿವಿಜನಲ್ ಆಫೀಸರನ್ನು ತೆಗೆಯಬೇಕಾಯಿತು. ಆಗ್ಯೆ ಉಳಿದ ಸಬ್ ಡಿವಿಜನಲ್ ಆಫೀಸರನ್ನು ದಕ್ಷಿಣ ಕೊಡಗಿನ ಸಬ್ ಡಿವಿಜನ್ ಚಾರ್ಜಿನಲ್ಲಿ ಡುವದರ ಬದಲು, ಅವರನ್ನು ಎಗ್ಸಿಕ್ಯುಟಿವ್ ಇಂಜಿನಿಯರ ವರ್ಸನಲ್ ಅಸಿಸ್ಟೆಂಟರಾಗಿ ನೇಮಿಸಿದರು. ಇದು ಬೇರೆ ಯಾವ ಪ್ರಾಂತ್ಯದಲ್ಲಿಯೂ ಇಲ್ಲದ ಏರ್ಪಾಡಾಗಿದೆ. ಈ ಹೊಸ ಏರ್ಪಾಡಿನಿಂದ ಒಂದು ಸಬ್ ಡಿವಿಜನನ್ನು ಇಟ್ಟುಕೊಳ್ಳುವುದಕ್ಕಿಂತ ಹೆಚ್ಚು ಖರ್ಚಾಗುವುದಲ್ಲದೆ, ಕಾರ್ಯದಕ್ಷತೆಯೂ ಕಡಿಮೆಯಾಗುವುದೆಂದು ಆಗಲೇ ಸೂಚಿಸಿದ್ದೆವು. ಈ ಮೂತನ ನಿರ್ಣಯವು ಈಗ ಒಂದೂ ಕಾಲು ವರ್ಷದ ಅನುಭವದಿಂದ ಇಲಾಖೆಯ ಮೇಲಧಿಕಾರಿಗಳಿಗೆ ಗೊತ್ತಾಗಿರಬಹುದಾಗಿ ನಂಬುತ್ತೇವೆ. ಯಾಕಂದರೆ, ಸಬ್ ಡಿವಿಜನಲ್ ಆಫೀಸರು ದಕ್ಷಿಣ ಕೊಡಗಿನಲ್ಲಿ ಮೂತ್ಯ ಸುತ್ಮಟ್ಟೇಕಾಗಿರಬೇಕಾದಲ್ಲಿ ಪರ್ಸನಲ್ ಅಸಿಸ್ಟೆಂಟರು ಇಡೀ ಕೊಡಗಿನಲ್ಲಿ ತಿರುಗಾಡಬೇಕಾದ ಕಾರಣ ಪರ್ಸನಲ್ ಅಸಿಸ್ಟೆಂಟರ ಪ್ರಯೋಜನದ ಭತ್ಯವು ಸಬ್ ಡಿವಿಜನಲ್ ಆಫೀಸರದಕ್ಕಿಂತ ಎರಡರಷ್ಟಾಗುತ್ತದೆ. ಉಸ್ತುವಾರಿಯ ವಿಸ್ತೀರ್ಣವು ಹೆಚ್ಚಾದುದರಿಂದ ಪರ್ಸನಲ್ ಅಸಿಸ್ಟೆಂಟರಿಗೆ ಸಬ್ ಡಿವಿಜನಲ್ ಆಫೀಸರಷ್ಟು ಕೆಲಸಕ್ಕೆ ನಿಗವಿಡಲು ಸಾಧ್ಯವಾಗುವುದಿಲ್ಲ. ಪರ್ಸನಲ್ ಅಸಿಸ್ಟೆಂಟರು ಎಗ್ಸಿಕ್ಯುಟಿವ್ ಇಂಜಿನೀಯರಿಗೆ ಬರೇ ಸಹಾಯಕರಾಗಿರುವುದರಿಂದ ಅವರಿಗೆ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಆಫೀಸರಷ್ಟು ಜವಾಬ್ದಾರಿಕೆಯೂ ಇರುವುದಿಲ್ಲ. ಸಬ್ ಡಿವಿಜನುಗಳನ್ನು ತೆಗೆದು ಹಾಕಿದರೂ ಅವುಗಳಿಗೆ ಸಂಬಂಧ ಪಟ್ಟ ಆಫೀಸುಗಳ ಸಿಬ್ಬಂದಿಯಲ್ಲಿ ಖೋತೆಯೇನೂ ಮಾಡಲ್ಪಟ್ಟಿರುವುದಿಲ್ಲ.

ಮೇಲೆ ಸೂಚಿಸಿರುವ ವಿಷಯಗಳು ಎಗ್ಸಿಕ್ಯುಟಿವ್ ಇಂಜಿನಿಯರವರ ಮತ್ತು ಅವರ ಪರ್ಸನಲ್ ಅಸಿಸ್ಟೆಂಟರ ಅನುಭವಕ್ಕೆ ಬಂದಿರದೆ ಇಂಬಲಿಕ್ಕಿಲ್ಲ. ಹಾಗಾದರೆ ಈಗಿನ ನವೀನ ಏರ್ಪಾಡನ್ನು ವಜಾಮಾಡಿ, ಪರ್ಸನಲ್ ಅಸಿಸ್ಟೆಂಟರನ್ನು ದಕ್ಷಿಣ ಕೊಡಗಿನ ಸಬ್ ಡಿವಿಜನಲ್ ಆಫೀಸರಾಗಿ ಮಾಡಿ, ಉತ್ತರ ಕೊಡಗಿನ ಸಬ್ ಡಿವಿಜನಿನ ಉಸ್ತುವಾರಿಯನ್ನು ಎಗ್ಸಿಕ್ಯುಟಿವ್ ಇಂಜಿನೀಯರವರೇ ನೋಡಿಕೊಳ್ಳಬಹುದಲ್ಲವೆ. ಈ ರೀತಿಯನ್ನನುಸರಿಸಿದ್ದೇ ಆದರೆ ಖರ್ಚು ಕಡಿಮೆಯಾಗುವುದಲ್ಲದೆ ಕೆಲಸವೂ ಜೆನ್ನಾಗಿ ನಡೆಯುವುದು. ಈಗ ಬೇಕಾದದ್ದೇ ಕಾರ್ಯದಕ್ಷತೆಯನ್ನು ಕಡಿಮೆ ಮಾಡದ ಖರ್ಚು ಖೋತೆ. ಇದನ್ನು ಸಾಧಿಸಲು, ದಿನದಿಂದ ದಿನದ ಆಡಳಿತ ಕ್ರಮವನ್ನು ನಡಿಸಲೂ ಸಹ ಹಣವಿಲ್ಲದಿರುವ ಈ ಬಿಕ್ಕಟ್ಟಿನ ಸಮಯದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ತಡಮಾಡಲಿಕ್ಕಿಲ್ಲವಾಗಿ ನಂಬುತ್ತೇವೆ.

ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್. ಮಂಗಳೂರು.

ಈ ಮೇಲ್ಕಂಡ ಸಂಸ್ಥೆಯವರ ಪ್ರಥಮ ವರ್ಷಾಬ್ಧವೇತನದ ವರದಿಯನ್ನು ನಾವು ಅತ್ಯಾದರದಿಂದ ಸ್ವೀಕರಿಸಿರುವೆವು. ಈ ಸಂಸ್ಥೆಯು 1929 ರಲ್ಲಿ ಸ್ಥಾಪಿತವಾಗಿ ಈ 5 ವರ್ಷಗಳ ಬಾಲ್ಯಾವಸ್ಥೆಯಲ್ಲಿಯೇ ಅದ್ಭುತ ಅಭಿವೃದ್ಧಿಯನ್ನು ಪಡೆಗಿರುವದು ಕನ್ನಡಿಗರಿಗೊಂದು ಹೆಮ್ಮೆಯ ಮಾತಾಗಿದೆ. ಯಾಕೆಂದರೆ, ಬ್ರಿಟಿಷ್ ಕರ್ನಾಟಕದಲ್ಲಿ ಜನ್ಮವೆತ್ತಿದ ಪ್ರಥಮ ವಿಮಾ ಕಂಪೆನಿ ಇದಾಗಿದೆ. ಕಂಪೆನಿಯು ತನ್ನ ಬಾಲ್ಯಾವಸ್ಥೆಯಲ್ಲಿಯೇ ಪಾಲಿಸಿದಾರರಿಗೆ 1000 ಕ್ಕೆ 10 ರ ಬೊನಸ್ಸನ್ನೂ, ಪಾಲುದಾರರಿಗೆ ಶೇಕಡ 5 ರಂತೆ ಡಿವಿಡೆಂಡನ್ನೂ ಹಂಚಿದ್ದು ನೋಡಿದಲ್ಲು, ಈ ಪ್ರಕಾರ ಪ್ರಥಮ ವರ್ಷಾಬ್ಧವೇತನ ಕಾಲದಲ್ಲೇ ಭಾರತದಲ್ಲಿ ಈ ಪ್ರಕಾರದ ಬೋನಸ್ಸು ಮತ್ತು ಡಿವಿಡೆಂಡನ್ನು ಹಂಚಿದ ಕಂಪೆನಿಗಳು ಕೇವಲ ಕೆಲವೇ ಎಂದು ಕಂಡು ಬರುತ್ತದೆ. ಕಂಪೆನಿಯ ಪ್ರಗತಿಯು ದೇಶದವರಿಗೆ ಅದರಲ್ಲಿರುವ ನಂಬಿಕೆಯನ್ನು ವ್ಯಕ್ತಗೊಳಿಸುತ್ತದೆ. ಈ ಸಂಸ್ಥೆಗೆ ಮಾತ್ಯಷ್ಟು ಪ್ರೋತ್ಸಾಹ ಕೊಟ್ಟು ಇದರ್ತ್ಪ್ರಭಾವವು ಸಮಗ್ರ ಭಾರತದಲ್ಲಿ ಪ್ರದೀಪಿಸುವಂತೆ ಮಾಡಿ ನಾಡಿನ ಕೀರ್ತಿಯನ್ನುಳಿಸಬೇಕಾಗಿದೆ. ಕನ್ನಡಿಗರಾದರೊ ಈ ವಿಷಯ್ಯ ಹಿಂದುಳಿಯಲಿಕ್ಕಿಲ್ಲವೆಂದೇ ನಾವು ನಂಬುತ್ತೇವೆ.

ಅಸೆಂಬ್ಲಿಯ ಅಧಿವೇಶನ.

ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಬಿಲ್.

[ಕಳೆದ ಸತ್ಯಾಗ್ರಹ ಚಳವಳಿಯ ಸಮಯದಲ್ಲಿ ಜಾರಿಗೆ ತರಲ್ಪಟ್ಟ ಕ್ರಿಮಿನಲ್ ಎಮೆಂಡ್‌ಮೆಂಟ್ ಆಕ್ಟು ಬರುವ ದಿಸೆಂಬರ್ 18 ಕ್ಕೆ ಅಂತ್ಯವಾಗುವುದರಿಂದ ಅದನ್ನು ಶಾಶ್ವತಗೊಳಿಸುವ ಉದ್ದೇಶದಿಂದ ಅಸೆಂಬ್ಲಿಯಲ್ಲಿ ಕೆಲವು ತಿದ್ದುಪಡಿಗಳನ್ನೊಳಗೊಂಡು ಪುನಃ ಒಂದು ಬಿಲ್ ಚರ್ಚಿಸಲ್ಪಡುತ್ತಲಿದೆ. ಆ ವಿಷಯದ ಚರ್ಚೆಯ ಸಾರಾಂಶವು ಈ ಕೆಳಗೆ ಕೊಡಲ್ಪಟ್ಟಿರುವುದು.]

ಈ ಮಸೂದೆಯನ್ನು ಸರ್ಕಾರಿ ಹೋಂ ಮೆಂಬರರಾದ ಸರ್ ಹೆನ್ರಿ ಕ್ರೈಕ್‌ರವರು ಅಸೆಂಬ್ಲಿಯ ಮುಂದಿಟ್ಟು ಈ ಪ್ರಕಾರ ಸಮರ್ಥಿಸಿದರು:—'ಸರ್ಕಾರದ ಆಡಳಿತವು ವ್ಯವಸ್ಥೆಯಿಂದ ಸಾಗುತ್ತಲಿರಬೇಕಾದರೆ ಈ ಪ್ರಕಾರದ ಖಾನೂನುಗಳು ಅತ್ಯಾವಶ್ಯಕ. ದೇಶದಲ್ಲಿನ ಶಾಂತಿಗೆ ಭಂಗವನ್ನುಂಟುಮಾಡುವ ಅದೆಷ್ಟೋ ಉಪದ್ರಗಳಿವೆ. ಇದು ಒರೇ ಶಾಸನ ಭಂಗ ಚಳವಳವನ್ನಡಗಿಸಲಿಕ್ಕಾಗಿ ಅಲ್ಲ. ಕ್ರಾಂತಿಕಾರರ ಕೂಟಗಳನ್ನೂ, ಸಮಾಜಜಕ್ಕೇನೇ ಕೇಡು ತರುವಂಥ ಸಮುಷ್ಯವಾದಿಗಳ (Communists) ಗುಪ್ತ ಚಳವಳಿಯನ್ನು ಎದುರಿಸಲಿಕ್ಕಾಗಿ ಈ ಕಾನೂನುಗಳ ಅವಶ್ಯವಿದೆ. ಕಳೆದ ಅಸೆಂಬ್ಲಿಯಲ್ಲಿ ಈ ಮಸೂದೆಗೆ ಒರೇ 3 ವರ್ಷಗಳ ಅವಧಿಯನ್ನು ಕೊಟ್ಟದ್ದರಿಂದ ಇದರ ಅವಶ್ಯಕತೆಯು ಸಂಪೂರ್ಣವಾಗಿ ವ್ಯಕ್ತಗೊಂಡಿರುವದಿಲ್ಲ. ಆದ್ದರಿಂದ ಇದನ್ನು ಶಾಶ್ವತಗೊಳಿಸಿದರೇನೇ ಇದರ ಪ್ರಯೋಜನವು ತಿಳಿಯಬರುವದು. ಚಳವಳಗಾರರು ಈ ಆಕ್ಟಿನ ಸಮಯವು ಪೂರ್ತಿಯಾಲೆಂದು ತತ್ಕಾಲಕ್ಕೆ ಸುಮ್ಮನಿರುವರೆಂದು ಊಹಿಸಲೂ ಬಹುದು. ಕ್ರಾಂತಿಯು ಇನ್ನೂ ಪೂರ್ಣ ಅಡಗಿರುವುದಿಲ್ಲ. ಸನುಷ್ಯಶಾದಿಗಳಿಗೆ ಪ್ರದೇಶಗಳಿಂದ ದ್ರವ್ಯ ಸಹಾಯ ಬರುತ್ತಲಿರುವುದರಿಂದ ಅವರನ್ನು ಅಡಗಿಸಲು ಸರಕಾರಕ್ಕೆ ಯಥೇಚ್ಛ ಅಧಿಕಾರಗಳಿರಬೇಕು.

ಪಿಕೆಟಿಂಗು ರಾಜಕೀಯ ವಿಚಾರದಲ್ಲಲ್ಲದೆ, ವೈಯಕ್ತಿಕ ವಿಚಾರಗಳಲ್ಲಿ ಪ್ರಯೋಗಕ್ಕೆ ಬಂದಿರುವದರಿಂದ ಇದರಿಂದ ಹೆಚ್ಚು ಹಾನಿ ಇರುವುದು. ಇದನ್ನು ತಡೆಗಟ್ಟಲು ಸೆಕ್ಷನ್ಕಾಕ್ಕೆ ಹೆಚ್ಚಿಸಕಾಯಿದೆಧಳಗೆಕ್ಯವಿಧಿ ಅಲ್ಲದೆ ಪತ್ರಿಕೆಗಳಲ್ಲನೇಕವು ಅಹಿರಂಗವಾಗಿ ಕ್ರಾಂತಿಗಳನ್ನು ಸಮರ್ಥಿಸುತ್ತಿರುವುದರಿಂದಲೂ, ಆಗಿಂದಾಗ್ಯೆ ಮತವಿಚಾರದ ಮನಸ್ತಾಪಗಳನ್ನು ಪ್ರಚೋದಿಸುತ್ತಲಿರುವುದರಿಂದಲೂ ಶಾಂತಿಗೆ ಹೆಚ್ಚಿನ ಭಂಗವು ಬರುತ್ತಲಿರುವದು. ಈ ವಿಷಯದಲ್ಲಿ ಮೆ. ಗಾಂಧಿಯವರೇ 1931ರಲ್ಲಿ ತಮ್ಮ 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ವ್ಯಕ್ತಪಡಿಸಿರುವರು. ಪ್ರತ್ಯೇಕವಾಗಿ ಪಂಜಾಬು ಮತ್ತು ಬಂಗಾಳದಲ್ಲಿನ ಪತ್ರಿಕೆಗಳಲ್ಲನೇಕವು ಈ ಪ್ರಕಾರದ್ದಿವೆ. ಇವುಗಳ ಮೇಲೆ ತಕ್ಕ ಜಾಗ್ರತೆಯನ್ನು ವಹಿಸಿ ಅವುಗಳನ್ನು ತಕ್ಕ ಪ್ರಕಾರದಿರಿದಿಡಲಿಕ್ಕಾಗಿ ಈ ಖಾನೂನಿನ ಅವಶ್ಯಕತೆಯಿದೆ.

ಒಟ್ಟಿನಲ್ಲಿ ಮುಂದಕ್ಕೆ ಬರಲಿರುವ ಹೊಸ ರಾಜ್ಯಾಳಿಕತ್ವವು ಸಾಂಗವಾಗಿ ನಡೆಯಬೇಕಾದರೆ ಈ ಸಭೆಯು ಈ ಖಾನೂನನ್ನು ಮಂಜೂರು ಮಾಡಿ ಮುಂದಿನ ಹೊಸ ರಾಜ್ಯಾಳಿಕತ್ವಕ್ಕೂ ಮತ್ತು ಅಂದೋಳನೆಗಳನ್ನು ಅಪೇಕ್ಷಿಸದೆ ಇರುವ ಮಿಲ್ಯಗಟ್ಟಲೆ ಪ್ರಜೆಗಳ ಹಿತಕ್ಕೂ ಅವಶ್ಯವನ್ನುಂಟುಮಾಡಬೇಕಾಗಿದೆ.'

ಮೆ. ಯಸ್. ಸತ್ಯಮೂರ್ತಿಯವರು 1½ ಗಂಟೆ ಕಾಲ ಮಾಡಿದ ಸ್ವಾರಸ್ಯವಾದ ಭಾಷಣದ ಸಾರಾಂಶ:—'ದೇಶದಲ್ಲಿರುವ ಅತೃಪ್ತಿಯನ್ನು ಅಡಗಿಸಲು ಪ್ರಯತ್ನಿಸುವುದರ ಬದಲು ಅಶಾಂತಿಯ ಮೂಲ ಕಾರಣಗಳನ್ನು ಕಂಡು ಹಿಡಿದು, ಇಂಡಿಯಾಕ್ಕೆ ಉದಾರ ಭಾವದ ಸ್ವರಾಜ್ಯವನ್ನು ಕೊಡಿರಿ. ಈ ಆಕ್ಟಿನಲ್ಲಿರುವ ಅಧಿಕಾರಗಳನ್ನು ಸರ್ಕಾರದವರು ಇಟ್ಟುಕೊಳ್ಳುವುದೊಂದು ಪಟ್ಟಿಕೆನ್ ಯಾವ ಪಕ್ಷದವರಾದರೂ ಒಪ್ಪುವಂತೆ ಒಂದು ನಿರ್ಬಂಧನ್ನು ಸರ್ಕಾರಿ ಮೆಂಬರರು ರುಜುವಾತು ಮಾಡಲಿ. ಖಾನೂನು ಮತ್ತು ಶಾಂತಿಯನ್ನು ಕಾಪಾಡಲು ಹೊಸ ಪ್ರಾಂತೀಕ ಸರ್ಕಾರಗಳಿಗೆ ಬಿಡಬಹುದು. ಸಿಟ್ಟಿನಿಂದ ಖಾನೂನು ಮಾಡಬಾರದೆಂದು ಸರ್ಕಾರದವರನ್ನು ಎಚ್ಚರಿಸಬೇಕಾಗಿದೆ. ರಾಷ್ಟ್ರೀಯ ಯೂ ಅಂತರ ರಾಷ್ಟ್ರೀಯ ಕೇಡುಗಳನ್ನು ಹೋಗಲಾಡಿಸಲು ಶಾರೀರಿಕ ಹಿಂಸೆಯು ರೀತಿಗಿಂತ ಸವಿನಯ ಕಾಯಿದೆ ಭಂಗವು ಎಷ್ಟೋ ದಯಾಳುವಾದುದು. ನವ್ಯ ಈಗಿನ ತೆಂಡರೆಗಳಿಗೆ ಸ್ವರಾಜ್ಯವೆಲ್ಲನೆ ಈ ಖಾನೂನು ಔಷಧವಲ್ಲ. ಆದರೆ ಸರ್ಕಾರದವರಿಗೆ ಅವರ ಸಿದ್ಧಾಂತಗಳ ಮೇಲೆ ವಿಶ್ವಾಸವಿಲ್ಲ; ಆದುದರಿಂದ ಕೋರ್ಟುಗಳ ತೀರ್ಪುಗಳ ಬದಲು ಎಗ್ಸಿಕ್ಯುಟಿವ್ ಹುಕುಮುಗಳನ್ನಿಡುವ ಈ ಕೆಟ್ಟ ಖಾನೂನು ಅವರಿಗೆ ಬೇಕಾಗಿದೆ. ಮನುಷ್ಯನ ಹುಟ್ಟು ಹಕ್ಕಾದ ಶಾಂತ ರೀತಿಯ ಪಿಕೆಟಿಂಗನ್ನೂ ಕೂಡ ಶಿಕ್ಷಾರ್ಹವೂಡುವ ಈ ಖಾನೂನನ್ನು ಎಸೆಂಬ್ಲಿಯವರು ಸಂಪೂರ್ಣ ವಿರೋಧಿಸಬೇಕು.'

ಬಂಗಾಳದ ಉದ್ಯೋಗಸ್ಥ ಮೆಂಬರಾದ ಮೆ. ಗ್ರಿಫಿತ್ಸ್‌ರವರು ಹೇಳಿದ್ದೇನೆಂದರೆ:—'ಈ ಖಾನೂನಿನಲ್ಲಿ ಕಠಿಣ ಶರತ್ತುಗಳೇನೂ ಇಲ್ಲ. ಜನರ ಹುಟ್ಟು ಹಕ್ಕುಗಳಿಗೆ ಅಡ್ಡಿ ಬರುವಂತಿಲ್ಲ. ಇಂಡಿಯಾದ ಈಗಿನ ಸ್ಥಿತಿಯು ಇಂಗ್ಲೆಂಡಿನಲ್ಲಿದ್ದಾಗ ತಲ್ಲಿ ಇದಕ್ಕಿಂತ ಕಠಿಣ ಖಾನೂನುಗಳಿದ್ದವು. ಇಂಡಿಯಾ ಸರ್ಕಾರವು ಜನರ ಇರಾದೆ ಪ್ರಕಾರ ನಡಿಸಲ್ಪಡುವುದರಿಂದ ಈ ತರಹದ ಬಹು ಸುಲಭದ ಖಾನೂನು ಮಾಡಲ್ಪಡುವುದಾಗಿದೆ. ಸವಿನಯ ಕಾಯಿದೆ ಭಂಗ ಚಳವಳಿಯು ಖಾಯಂ ಆಗಿ ನಿಲ್ಲಿಸಲ್ಪಡದ್ದರಿಂದಲೇ ಇಂಥಾ ಖಾನೂನುಗಳ ಅವಶ್ಯಕತೆ. ಪತ್ರಿಕೆಗಳಲ್ಲಿ ಅಪಾಯಕರವಾದ ಲೇಖನಗಳನ್ನು ತಡೆಯಬೇಕು. ಈಗಿನ ಪ್ರೆಸ್ಸ್ ಆಕ್ಟು ಬಹು ಸಾಧುವಾದದ್ದು, ಒಂಗಾಳದ ಕೆಲವು ಪತ್ರಿಕೆಗಳು ಕ್ರಾಂತಿಕಾರರಿಗೆ ಉತ್ತೇಜನ ಕೊಡುತ್ತಿವೆ.'

'ಕೋಮುವಾರು ತತ್ವವೂ, ಕ್ರಾಂತಿಯ ತತ್ವವೂ ಅವಾಯಕರವಾಗಿರಬಹುದು; ಆದರೆ ಗುಪ್ತಸಂಚುಮಾತನ್ನು ನಂಬುವ ಬೇ ಜವಾಬ್ದಾರಿ ಉದ್ಯೋಗಸ್ಥರೇ ಎಲ್ಲದಕ್ಕಿಂತಲೂ ಅಪಾಯಕರವಾದವರು, ಸರ್ಕಾರಿ ಮೆಂಬರುಗಳ ಕಾರಣಗಳು ನ್ಯಾಯವಾದವಲ್ಲವೆಂದು ಮುಂತಾಗಿ ಮೆ ಗೌಬರವರು ಹೇಳಿದರು.

'ಪ್ರೆಸ್ಸ್ ಖಾನೂನಿನ ವೇರೆ ಪತ್ರಿಕೆಗಳನ್ನು ನಡಿಸುವುದು ಅಸಾಧ್ಯವಾಗಿದೆ. ಕ್ರಾಂತಿಕಾರರೆಲ್ಲರೂ ಕೊಲೆಗಾರರೆಂದು ಹೇಳಲಾಗುವುದಿಲ್ಲ; ಅವರಲ್ಲಿ ಅನೇಕರನ್ನು ಉತ್ತಮ ಕಾದೆ ಜೀವನ ನಡಿಸುವಂತೆ ಮಾಡಬಹುದಿತ್ತು. ಎಂದು ಮೊದಲಾಗ್ಯೆ ಮೆ ಕೃಷ್ಣಕಾಂತ ವೂಳವೀಯರು ಒಂದು ಗಂಟೆ ಕಾಲ ಮಾತಾಡಿದರು.

ಡಾ. ಜೆ. ಎ. ದೇಶಮುಖರವರು ತನ್ನ 1½ ಗಂಟೆಯ ಭಾಷಣದಲ್ಲಿ ಹೇಳಿದ್ದ

ವರ್ತಮಾನ ಸಂಗ್ರಹ.

ಒಳದೇಶ.

ಕಳೆದ ಜುಲೈ ತಿಂಗಳಲ್ಲಿ ಕೊಡಗಿನಲ್ಲಿ 388 ಜನನಗಳೂ, 466 ಮರಣಗಳೂ ಸಂಭವಿಸಿದವು.

ಚೀಫ್ ಕಮಿಷನರವರು ಈ ತಾ. 12 ನೇ ಗುರುವಾರ ಮಡಿಕೇರಿಗೆ ಬಂದಿರುವರು.

ಈ ವಾರ ಮಡಿಕೇರಿಯಲ್ಲಿ ಇಬ್ಬರು ಮುಸಲ್ಮಾನರಿಗೆ ಪ್ಲೇಗು ಅಂಟಿದೆಯೂಗಿ ತಿಳಿಯಬರುತ್ತದೆ.

ಕೊಡಗು ಕಮಿಷನರವರು ಇಂಗ್ಲೆಂಡಿನಿಂದ ಬಂಡ ತನ್ನ ಪತ್ನಿಯ ಸಮೇತ ಈ ತಾ. 9 ರಲ್ಲಿ ಬೆಂಗಳೂರಿನಿಂದ ಮಡಿಕೇರಿಗೆ ಬಂದರು.

ಕಮಿಷನರ ಆಫೀಸಿನ ಮೆ. ಹೆಚ್. ಯಂ. ಅಪ್ಪಣಮ್ಮಯ್ಯನವರು ಮದ್ರಾಸು ಸಿವಿಲ್ ಜುಡಿಷ್ಯಲ್ ಟೆಸ್ಟ್ ಪರೀಕ್ಷೆಯಲ್ಲಿ ಪಾಸಾಗಿರುವರೆಂದು ತಿಳಿಯುತ್ತೇವೆ.

ಮ. ರಾ. ಲೇಟ್ ಕೊಡಂದೆರ ಕುಟ್ಟಯ್ಯನವರ ಪುತ್ರ ವೆ., ಐಯ್ಯಪ್ಪನವರು ಈ ತಾ 6 ರಲ್ಲಿ ಬೆಂಗಳೂರು ಆಸ್ಪತ್ರೆಯಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಈ ತಾ 6ರಿಂದ 12ರ ವರೆಗೆ ಮಡಿಕೇರಿಯಲ್ಲಿ 10-34 ಇಂಚು ಮಳೆಯೂಗಿದೆ ಜೋರಾಗಿ ಮಳೆ ಬಿದ್ದ ತಾರೀಕು 9 ರಲ್ಲಿ 2-63 ಇಂಚಾಗಿತ್ತು. ಈ ವಾರ ಮಡಿಕೇರಿಯಲ್ಲಿ ಮಳೆಯೊಂದಿಗೆ ಗಾಳಿಯೂ, ಚಳಿಯೂ ಜೋರಾಗಿತ್ತು.

ಮೈಸೂರು ಪಟ್ಟದ ಕೊಡಗು ಸಂಘದವರು ಕೈಲ್ ಮ. ಹೂರ್ತ ಹಬ್ಬನನ್ನು ಈ ತಾ. 8 ರಲ್ಲಿ ಶ್ರೀರಂಗ ಪಟ್ಟದ 'ಸಾಕ್ಕಟ್ಸ್ ಗಾರ್ಡನ್'ನಲ್ಲಿ ಆಯುಧ ಪೂಜೆ, ಆಟೋಟಗಳು ಮತ್ತು ಊಟ ಉಪಚಾರಗಳಿಂದ ಆಚರಿಸಿದರೆಂದು ತಿಳಿಯಬರುತ್ತದೆ.

ಈ ತಾ. 3ರಲ್ಲಿ ಶನಿವಾರಸಂತೆಯಲ್ಲಿಯೂ, ತಾ. 4ರಲ್ಲಿ ಕೊಡ್ಲಿಪೇಟೆಯಲ್ಲಿಯೂ ಸಾರ್ವಜನಿಕ ಸಭೆಗಳು ಸೇರಿ ಖಾಸಗಿ ಜಾಗದ ಗಂಧದ ಮರಗಳಿಗೆ ಬೋನಸು ಕೊಡುವದನ್ನು ಕುರಿತು ಗಜೆಟಿನಲ್ಲಿ ಪ್ರಕಟವಾಗಿರುವ ಕರಡು ನಿಬಂಧನೆಗಳನ್ನು ಖಂಡಿಸಲಾಯಿತು.

ಕೊಯಂಬುತ್ತೂರು ಫಾರೆಸ್ಟ್ ಕಾಲೇಜಿನಲ್ಲಿ ರೇಂಜರ ತರಬೇತಿಗಾಗಿ ಅಪ್ಲಿಕೇಶನ್ ಹಾಕಿದ 2700 ಉಮೇದುವಾರರ ಪೈಕಿ ಐದು ಜನರು ವೂಶ್ಯ ಮದ್ರಾಸು ಸರ್ಕಾರದವರಿಂದ ಆರಿಸಲ್ಪಟ್ಟರೆಂದೂ, ಅವರಲ್ಲಿ ಮೆ. ಚಿಂಡಾನಾಡ ಸಿ. ಪೊಣ್ಣಪ್ಪನವರು ಒಬ್ಬರಾಗಿರುವರೆಂದೂ ತಿಳಿಯಬರುತ್ತದೆ.

ಪೆಪ್ಪುನಾಡು ಮೈತಾಡಿ ಗ್ರಾಮದ ರಿಟಯರ್ಡ್ ಉಪಾಧ್ಯಾಯರಾದ ಮ. ರಾ. ಬಿದ್ದಂಡ ಸುಬ್ಬಯ್ಯನವರೂ, ಮೂರ್ನಾಡು ಕಾಂತೂರು ಗ್ರಾಮದ ರಿಟಯರ್ಡ್ ಶ್ಯಾನುಭೋಗರಾದ ಮ. ರಾ. ಅವರೆಮಾದಂಡ ಮುದ್ದಯ್ಯನವರೂ ಈ ತಾ. 5 ರಲ್ಲಿ ಶಿವಾಧೀನರಾದರೆಂದು ತಿಳಿಯಲು ವ್ಯಸನಪಡುತ್ತೇವೆ.

ಭಾಗಮಂಡಲ ಗ್ರಾಮದಲ್ಲಿ ಬರುವ ತುಲಾ ಸಂಕ್ರಮಣದ ಸಮಯದಲ್ಲಿ ನಡೆಯುವ ತಲಕಾವೇರ ಜಾತ್ರೆಗೆ ಬರುವ ಅಕ್ಟೋಬರು ತಾ. 6 ರಿಂದ ನವಂಬರು 22 ರ ವರೆಗೆ ಪ್ಲೇಗ್ ಯೂ ವಾಂತಿಭೇದಿ ತಗಲಿದ ಪ್ರದೇಶಗಳಿಂದ ಜನರು ಬರುವುದನ್ನು ಚೀಫ್ ಕಮಿಷನರವರು ನಿರೋಧಪಡಿಸಿರುವರೆಂದು ಪ್ರಕಟವಾಗಿದೆ.

ಈ ವರ್ಷ ಆಗೊಸ್ತು ತಿಂಗಳಲ್ಲಿ ಒಟ್ಟು 24.27 ಇಂಚು ಮಳೆಯೂಗಿದೆ; ಕಳೆದ ವರ್ಷ ಆಗೊಸ್ತಿನಲ್ಲಿ 31.49 ಇಂಚು ಆಗಿತ್ತು. ಈ ವರ್ಷ ಜನವರಿ 1ರಿಂದ ಆಗೊಸ್ತು ಆಖೈರು ವರೆಗೆ 95-84 ಇಂಚು ಮಳೆಯೂಗಿದೆ; ಕಳೆದ ವರ್ಷ ಜನವರಿ 1ರಿಂದ ಆಗೊಸ್ತು 31ರ ವರೆಗೆ 92 10 ಇಂಚು ಮಳೆಯೂಗಿತ್ತು.

ಅರ್ಜಿದಾರನಲ್ಲಿ ಆನೆಗೆ ಗುಂಡು ಹೊಡೆಯಲು ಯೋಗ್ಯವಾದ ಆಯುಧ ಇದೆಯೆಂದು ಕಮಿಷನರವರಿಗೆ ತೃಪ್ತಿಯಾದ ಪಿನಹ ಆನೆಗೆ ಗುಂಡು ಹೊಡೆಯಲು ಲೈಸೆನ್ಸು ಕೊಡಲಾಗುವುದಿಲ್ಲವೆಂದೂ, ಲೈಸೆನ್ಸ್‌ದಾರನು ಕಮಿಷನರವರಿಂದ ಒಪ್ಪಲ್ಪಟ್ಟ ಲೈಸೆನ್ಸಿನಲ್ಲಿ ನಮೂದಿಸಿರುವ ಆಯುಧವನ್ನೇ ಉಪಯೋಗಿಸತಕ್ಕದೆಂದೂ ಚೀಫ್ ಕಮಿಷನರವರು ಹೊಸ ನಿಬಂಧನೆ ಮಾಡಿರುವರು.

ಕೊಡಗಿನ ಲಾಯರುಗಳು 200 ರೂ. ಗಳನ್ನು ಕೊಟ್ಟರೆ ಜುಡಿಷ್ಯಲ್ ಕಮಿಷನರವರ ಕೋರ್ಟಿನ್ನೊಳಗೊಂಡು ಕೊಡಗಿನ ಎಲ್ಲಾ ಕೋರ್ಟುಗಳಲ್ಲಿಯೂ ವಾದ ಮಾಡಲು ಅವರನ್ನು ಅಡ್ವಕೇಟ್ಸಾಗಿಳಾಗಿ ದಾಖಲು ಮಾಡುವದಕ್ಕೋಸ್ಕರ ಇಂಡಿಯನ್ ಸ್ಟ್ಯಾಂಪು ಆಕ್ಟು ಕೊಡಗಿಗೆ ಅನ್ವಯಿಸುವಂತೆ ತಿದ್ದುಪಡಿ ಮಾಡಲು ಒಂದು ಸುಸೂದೆಯನ್ನು ಕೊಡಗು ಕೌನ್ಸಿಲಿನಲ್ಲಿ ತರಲ್ಪಡುವುದಾಗಿ ತಿಳಿಯಬರುತ್ತದೆ.

ಇಂಡಿಯಾ ಸರ್ಕಾರದವರು ಗ್ರಾಮೋದ್ಧಾರ ಕಾರ್ಯಕ್ಕಾಗಿ ಮಂಜೂರು ಮಾಡಿರುವ ಹಣವು ಹೇಗೆ ಖರ್ಚು ಮಾಡಲ್ಪಡುವದೆಂದು ಎಸೆಂಬ್ಲಿಯಲ್ಲಿ ಮೆ. ಬಿ. ಕೆ. ದಾಸ್‌ರವರು ಕೇಳಿದ ಪ್ರಶ್ನೆಗೆ ಸರ್ಕಾರಿ ಮೆಂಬರರು ಕೊಟ್ಟ ಉತ್ತರದಲ್ಲಿ— ಕೊಡಗಿಗೆ ಕೊಟ್ಟಿರುವ 50,000 ರೂಪಾಯಿಗಳಲ್ಲಿ ರೂ. 32.500 ನೀರು ಸರಬರಾಯಿಗೂ, ರೂ. 15,000 ದನಗಳ ಕಳಿ ಅಭಿವೃದ್ಧಿಗೊಳಿಸಲು ಡಿಸ್‌ಕ್ರೆಷನರಿ ಗ್ರಾಂಟು ಕೊಡಲಿಕ್ಕೂ, ಉಪಯೋಗಿಸಲ್ಪಡುವದೆಂದು ಹೇಳಲ್ಪಟ್ಟಿತು.

ಪೊಳ್ಳಿಬೆಟ್ಟದ ಕಾಫಿ ಕನ್‌ಸಾಲಿಡೇಟೆಡ್ ಎಸ್ಟೇಟ್ಸ್ ಕಂಪೆನಿಯ ಹಣವನ್ನು ದುರುಪಯೋಗಪಡಿಸಿದ ಸಂಬಂಧ ಮೆ ಬಾಬಿಂಗ್ಟನ್‌ರವರಿಗೆ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಕೋರ್ಟಿನಲ್ಲಿ ಕೋರ್ಟು ಎಳುವ ವರೆಗೆ ಸಜವೂ, ನೂರು ರೂಪಾಯಿ ಜುಲುಮಾನೆಯೂ, ಜುಲುಮಾನೆ ಕೊಡದೆ ಹೋದರೆ ಒಂದು ತಿಂಗಳ ಸಜೆಯೂ ವಿಧಿಸಲಾಗಿದ್ದರ ಮೇಲೆ ಮೆ. ಬಾಬಿಂಗ್ಟನ್‌ರವರು ಕಮಿಷನರ ಕೋರ್ಟಿಗೆ ಅಪ್ಪೀಲು ಮಾಡಿದ್ದರು. ಅಪ್ಪೀಲಿನಲ್ಲಿ ಕೆಳಕೋರ್ಟಿನ ತೀರ್ಮಾನವೇ ಖಾಯಂ ಮಾಡಲ್ಪಟ್ಟಿತೆಂದು ತಿಳಿಯುತ್ತೇವೆ.

ಹಿಂದೂದೇಶ.

ಬಾಬೂ ರಾಜೇಂದ್ರ ಪ್ರಸಾದರವರು ಅಲ್ಲಹಾಬಾದಿಗೆ ಬಂದಂದಿನಿಂದ ಅವರಿಗೆ ಮೈ ಚೆನ್ನಾಗಿಲ್ಲ. ಬಹಳ ನಿತ್ರಾಣವಾಗಿದ್ದಾರೆಂದು ತಿಳಿದುಬರುತ್ತಿದೆ.

ತನ್ನನ್ನು ಒಬ್ಬ ಮುದುಕನಿಗೆ ಲಗ್ನವಾಡಿ ಕೊಡುವರೆಂಬ ವೈರಾಗ್ಯದಿಂದ, ನಿಸಾಷದ ತಲೋಕಿನಲ್ಲಿ 11 ವರ್ಷದ ಒಬ್ಬ ಬಾಲಿಕೆಯು ಆತ್ಮ ಹತ್ಯೆ ಮಾಡಿಕೊಂಡಳು.

ಅಬ್ಬೆಟಾಬಾದ ಮೈಮೂನಿಕ ನಿಲ್ದಾಣದಲ್ಲಿ ಬಾಂಬು ಸ್ಫೋಟವಾಗಿ, ವಿಮಾನದ ಅಪಘಾತವಾಯಿತು 5 ಮಂದಿ ಸತ್ತೇಹೋದರು. 30 ಮಂದಿಗೆ ಗಾಯಗಳಾಗಿವೆ. ಈ ಬಾಂಬು ಸ್ಫೋಟದಿಂದ 2 ವಿಮಾನಗಳು ಪೂರ್ತಿ ನಾಶವಾದವು. ಅಪಘಾತದ ಕಾರಣವು ಇನ್ನೂ ಗೊತ್ತಾಗಿರುವದಿಲ್ಲ.

ಮಧ್ಯ ಪ್ರಾಂತ್ಯದಲ್ಲಿ ವಾಂತಿಭೇದಿಯ ಹಾವಳಿಯು ಜೋರಾಗಿದೆ ಕಳೆದ ವಾರದಲ್ಲಿ ಈ ರೋಗವು 2561 ಜನರಿಗೆ ಅಂಟಿ, 1023 ಮರಣಗಳುಂಟಾದವು. ಜುಲೈ 1 ರಿಂದ ಈ ತಾ. 7 ರ ವರೆಗೆ 7,215 ಜನರು ಈ ರೋಗಕ್ಕೆ ತುತ್ತಾಗಿರುವರು.

ಗಡಿನಾಡಿನಲ್ಲಿ ಮಹಮ್ಮದ್ ಲಷ್ಕರಿನ ಸಂಖ್ಯೆಯೂ, ಹಾವಳಿಯೂ ಹೆಚ್ಚುತ್ತಿದೆ ಎಂದು ಸುದ್ದಿ. ಇಂಡಿಯನ್ ಸೈನ್ಯಗಳಿಗೂ, ಅವುಗಳಿಗೂ ಕಾದಾಟವಾಗುತ್ತಲೇ ಇದೆ. ಶತ್ರುಪಡೆಯಲ್ಲಿ ಈಚೆಗೆ 20 ಮಂದಿ ಸತ್ತರೆಂದೂ, 59 ಮಂದಿ ಗಾಯಗೊಂಡರೆಂದೂ ಪ್ರಕಟವಾಗಿದೆ.

ಕಾಂಗ್ರೆಸಿನವರು ಅಧಿಕಾರ ಸ್ವೀಕಾರದ ವಿಷಯದಲ್ಲಿ ಭಿನ್ನಾಭಿಪ್ರಾಯ ಹುಟ್ಟಿದುದರ ಪರಿಣಾಮವಾಗಿ ಪಂಜಾಬಿನ ಕಾಂಗ್ರೆಸು ಮುಖಂಡರಾದ ಸರ್ದಾರ್ ಸಾರ್ದೂಲ್ ಸಿಂಗರವರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯತನಕ್ಕೆ ರಾಜೀನಾಮೆ ಕೊಟ್ಟಿರುವದಾಗಿ ವರ್ತಮಾನ

ಈ ತಾ. 8 ರಿಂದ 10 ರ ವರೆಗೆ ಟ್ಯುಟಿಕೋರಿನಿನಲ್ಲಿ ಶ್ರೀಯುತ ಸಿ. ಆರ್. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆದ ತಿನ್ನವೆಲ್ಲಿ ಜಿಲ್ಲಾ ಕಾನ್‌ಫರೆನ್ಸಿನಲ್ಲಿ ಕಾಂಗ್ರೆಸು ಪಕ್ಷದವರು ಹೊಸ ಕೌನ್ಸಿಲುಗಳಲ್ಲಿ ಮಂತ್ರಿ ಪದವಿಯನ್ನು ಸ್ವೀಕರಿಸುವುದು ಅತ್ಯಾವಶ್ಯಕವೆಂಬ ಠರಾವು ಪಾಸಾಯಿತು.

ಈ ತಾ. 24 ರಿಂದ ಅಕ್ಟೋಬರ್ 2 ರ ವರೆಗೆ ಗಾಂಧಿ ಜನ್ಮೋತ್ಸವವನ್ನು ದೇಶದಲ್ಲೆಲ್ಲಾ ಆಚರಿಸಬೇಕೆಂದೂ, ಆ ವಾರದಲ್ಲಿ ಎಲ್ಲರು ತಮ್ಮ ತಮ್ಮ ಶಕ್ತ್ಯಾನುಸಾರ ಖಾದಿ ಪ್ರಚಾರಕ್ಕೆ ಸಹಾಯವನ್ನು ಕೊಡಬೇಕೆಂದೂ ಕಾಂಗ್ರೆಸು ಅಧ್ಯಕ್ಷರಾದ ಬಾಬುರಾಜೇಂದ್ರ ಪ್ರಸಾದರು ಬಿನ್ನೈಸಿರುವರು.

ಪಾಟಿಯಾಲಾ ಮಹಾರಾಜರು ಈ ತಾ. 10ರಲ್ಲಿ ಜರ್ಮನಿಯಲ್ಲಿ ಹರ್ ಹಿಟ್ಲರವರೊಡನೆ ಭೇಟಿಯಾಗಿ ಸುಮಾರು 40 ನಿಮಿಷಗಳ ವರೆಗೆ ಸಂಭಾಷಣೆ ನಡೆಸಿದರೆಂದೂ, ಸಂಭಾಷಣೆಯಲ್ಲಿ ರಾಜಕೀಯ ವಿಚಾರಗಳೇನೂ ಇರಲಿಲ್ಲವೆಂದೂ ತಿಳಿದು ಬಂದಿದೆ. ಮಹಾರಾಜರಿಗೆ ಶಕ್ಕ ಸನ್ಮಾನಗಳು ಜರ್ಮನಿಯವರಿಂದ ಸಲ್ಲುತ್ತಲಿದೆಯಂತೆ.

